# ಭೂಲೋಕಕ್ಕೆ ಕ್ರಿಸ್ತನ ವಾಸ್ತವ ಹಿಂದಿರುಗುವಿಕೆ

ಭೂಲೋಕದಲ್ಲಿ

ಸಮಾಧಾನ!

— ನಿಶ್ಚಯವಾದದ್ದು

Rs 2

> "ಆತನು ನಿಮಗೆ ನೇಮಕವಾಗಿರುವ ಕ್ರಿಸ್ತನಾದ ಯೇಸುವನ್ನು ಕಳುಹಿಸಿಕೊಡುವನು, ಆದರೆ ಸಮಸ್ತವನ್ನು ಸರಿಮಾಡುವ ಕಾಲವು ಬರುವತನಕ ಪರಲೋಕವೇ ಆ ಕ್ರಿಸ್ತನ ಸ್ಥಾನವಾಗಿರಬೇಕು. ಆ ಕಾಲದ ವಿಷಯವಾಗಿ ದೇವರು ಪೂರ್ವದಲ್ಲಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆ"—
>
> ಅ.ಕೃ, 3:20, 21.

ಅನೇಕರು ಕ್ರಿಸ್ತನ ಹಿಂದಿರುಗುವಿಕೆಯನ್ನು ನಂಬುವುದಾಗಿ ಹೇಳುತ್ತಾರೆ. ಆದರೆ ಅವರು ಈ ವಿಷಯದಲ್ಲಿ ದೇವರ ವಾಕ್ಯವು ಏನು ಹೇಳುತ್ತದೆಂಬುದನ್ನು ಗಣನೆಗೆ ತಾರದೆ, ಜನಪ್ರಿಯ ಸಂಪ್ರದಾಯವನ್ನು ಹಿಡಿದವರಾಗಿರುತ್ತಾರೆ. ಸತ್ಯವು ಎಂಥಹ ಪರಿಪೂರ್ಣ ಸಿದ್ಧಾಂತವೆಂದರೆ ಅದು ಗಲಿಬಿಲಿಯನ್ನುಂಟುಮಾಡದೆ ಒಂದು ತಪ್ಪನ್ನಾದರೂ ಸೇರಿಸಿರುವುದನ್ನು ಒಪ್ಪಿಕೊಳ್ಳುವುದಿಲ್ಲ. ಕ್ರಿಸ್ತನ ಹಿಂದಿರುಗುವಿಕೆಯು ದೇವರ ವಾಕ್ಯದಲ್ಲೆಲ್ಲಾ ಒಂದು ಪ್ರಜ್ವಲಿಸುವ ಬೆಳಕಾಗಿದೆ. ಸತ್ತವರ ಪುನರುತ್ಥಾನ, ನೀತಿವಂತರ ಪ್ರತಿಫಲ, ವಾಗ್ದಾನದ ಒಡಂಬಡಿಕೆಗಳ ನೆರವೇರುವಿಕೆ, ಸಂಕ್ಷಿಪ್ತವಾಗಿ ಪ್ರಪಂಚದ ಬಿಡುಗಡೆ—ಇವುಗಳು ಅದರ ಮೇಲೆ ಅವಲಂಬಿಸಿವೆ. ಎಲ್ಲಾ ಒಳ್ಳೆಯ ಮನುಷ್ಯರು ಸತ್ತಾಗ ಪರಲೋಕಕ್ಕೆ ಹೋಗುತ್ತಾರೆ ಮತ್ತು ನೀತಿವಂತರ ನಿತ್ಯ ನಿವಾಸವು ಪರಲೋಕವೇ ಹೊರತು ಭೂಮಿಯಲ್ಲ, ಎಲ್ಲಾ ಒಳ್ಳೆಯವರು ಅಲ್ಲಿಗೇ ಹೋಗಿರುತ್ತಾರೆ ಮತ್ತು ರಕ್ಷಿಸಲ್ಪಟ್ಟಿದ್ದಾರೆ ಎಂಬ ನಂಬಿಕೆಯಿಂದ ಈ ಮುಖ್ಯವಾದ ಸತ್ಯವು (ಕ್ರಿಸ್ತನ ಹಿಂದಿರುಗುವಿಕೆಯು) ತೊಡೆದುಹಾಕಲ್ಪಟ್ಟಿದೆ. ಆದಾಮನ ಸಂತಾನದ ಎಲ್ಲಾ ಒಳ್ಳೆಯವರು ಪರಲೋಕಕ್ಕೆ ಒಯ್ಯಲ್ಪಡುವುದು ಮತ್ತು ಎಲ್ಲಾ ಕೆಟ್ಟವರು ಹಿಂಸೆಯ ನರಕಕ್ಕೆ ತಳ್ಳಲ್ಪಟ್ಟು ಈ ಭೂಮಿಯನ್ನು ದಹಿಸುವುದಾದರೆ, ಕ್ರಿಸ್ತನು ಭೂಮಿಗೆ ಹಿಂದಿರುಗುವುದು ಯಾಕೆ? ಕ್ರಿಸ್ತನ ವೈಯಕ್ತಿಕ ಹಿಂದಿರುಗುವಿಕೆಯು ಮತ್ತು ಭೂಮಿಯ ಮೇಲೆ ಆತನ ಆಳ್ವಿಕೆಯ ನಂಬಿಕೆಗೆ ಸ್ಥಳವೆಲ್ಲಿದೆ? ಸತ್ತಾಗ ಪರಲೋಕಕ್ಕೆ ಹೋಗುತ್ತಾರೆಂಬ ತತ್ವಕ್ಕೆ ಬದ್ಧರಾಗಿರುವವರು ಕ್ರಿಸ್ತನ ಎರಡನೇ ಬರುವಿಕೆಯಲ್ಲಿ ನಂಬಿಕೆ ಇಡುವುದು ಅಸಂಬದ್ಧವಾಗಿದೆ. ಈ ಅಸತ್ಯವಾದ ತತ್ವವು ಸತ್ಯದೊಂದಿಗೆ ಹೊಂದಿಕೆಯಾಗುವುದಿಲ್ಲ. ಪರಲೋಕಕ್ಕೆ ಹೋಗುವ ಮೂಲ "ಸಾಂಪ್ರದಾಯಿಕ" ತತ್ವಕ್ಕೆ ಅಂಟಿಕೊಂಡು ಕ್ರಿಸ್ತನ ವೈಯಕ್ತಿಕ ಹಿಂದಿರುಗುವಿಕೆಯನ್ನು ಪೂರ್ಣವಾಗಿ ನಿರಾಕರಿಸುವುದೇ ಅಂಥವರಿಗೆ ಹೆಚ್ಚು ಸಮಂಜಸವಾಗಿದೆ. ಆದರೆ ಸತ್ಯವನ್ನು—ಪೂರ್ಣ ಸತ್ಯವನ್ನು—ಸತ್ಯವಲ್ಲದೆ ಬೇರೇನನ್ನೂ—ಅಂಗೀಕರಿಸುವುದೊಂದೇ ಸುರಕ್ಷಿತ ಮಾರ್ಗವಾಗಿದೆ. ಮುಖ್ಯವಾಗಿ ಹಳೇ ಒಡಂಬಡಿಕೆಯಲ್ಲಿ ನಾವು ಕಾಣುವ ಪ್ರವಾದನೆಗಳ ಮತ್ತು ವಾಗ್ದಾನಗಳಿಂದ ಪ್ರತಿಯೊಬ್ಬ ಸತ್ಯವೇದಾಧ್ಯಯ

ನೀಯೂ ನಿರೀಕ್ಷಿಸುವುದೇನು ? ನಾವು ಹೊಂದಿರುವ ಪ್ರಥಮ ವಾಗ್ದಾನವಾದ "ಆ ಸ್ತ್ರೀಯ ಬೀಜವು (ಸಂತತಿಯು) ಸರ್ಪದ ತಲೆಯನ್ನು ಜಜ್ಜುವುದು" ಎಂಬುದು. ಆ ಸ್ತ್ರೀಯ ಬೀಜವಾದ (ಸಂತತಿ) ಕ್ರಿಸ್ತನು, ಸರ್ಪದ ತಲೆಯನ್ನು ಜಜ್ಜುವದು. ಎಂಬುದರಲ್ಲಿ ಸೂಚಿತವಾಗಿರುವುದನ್ನು ನೆರವೇರಿಸುತ್ತಾನೆಂದು ನಮಗೆ ನಿಶ್ಚಯವಾಗಿಯೂ ಅರ್ಥ ಕೊಡುತ್ತದೆ. ಈ ಪ್ರಪಂಚದೊಳಕ್ಕೆ ಸರ್ಪವು ಏನು ಕೆಟ್ಟದ್ದನ್ನು ಪ್ರವೇಶ ಮಾಡಿಸಿತು ? ಯಾವುದೇ ರೂಪದಲ್ಲಿ ಅದು ಕಾಣಿಸಿಕೊಂಡಿದ್ದರೂ ಸಹ ನಿಜವಾಗಿಯೂ ಅದು ಎಲ್ಲಾ ಕೆಟ್ಟದ್ದಕ್ಕೂ ಕಾರಣವಾಗಿದೆ. ಪ್ರಥಮ ಕಾರಣವಾದ ಸರ್ಪದ ಸುಳ್ಳನ್ನೊಳಗೊಂಡ ಎಲ್ಲಾ ಕೆಟ್ಟದ್ದನ್ನೂ ತೆಗೆದು ಹಾಕುವುದೆಂದರ್ಥ. ನಾವು ಆ ಕಾಲಗಳಿಂದ ಆ ಸ್ತ್ರೀಯ ಬೀಜವು ಕಾಣಿಸಿಕೊಳ್ಳುವವರೆಗೂ ಒರುವವರಾಗಿದ್ದೇವೆ, ವಾಗ್ದಾನವು ಸೂಚಿಸಿರುವ ಹಾಗೆ ಆತನು ಸರ್ಪದ ತಲೆಯನ್ನು ಜಜ್ಜುತ್ತಾನೆಯೇ ? ಪ್ರಪಂಚಕ್ಕೆ ತುಂಬಿದ್ದ ಕೆಡಕುಗಳನ್ನು ಆತನು ಆಗ ತೆಗೆದುಹಾಕುತ್ತಾನೋ ? ಆತನು ಸರ್ಪದ ತಲೆಯನ್ನುಜಜ್ಜಿದನು ಎಂದರೆ, ಅದು ಆತನಿಗೇ ಅನ್ವಯಿಸುವುದಾದರೆ, ತನ್ನಲ್ಲೇ ತನಗೋಸ್ಕರವೇ ಆತನು ಮರಣದ ಮೇಲೆ ಜಯ ಹೊಂದಿದನು. ಆದರೆ ವಿಶ್ವಾಸದಲ್ಲಿ ಸತ್ತವರೆಲ್ಲರನ್ನೂ ಮರಣವು ಇನ್ನೂ ಸಮಾಧಿಯಲ್ಲೇ ಹಿಡಿದಿಟ್ಟಿರುತ್ತದೆ ಮತ್ತು ಪುನರುತ್ಥಾನವು ಆಗಲೇ ಆಗಿ ಹೋಯಿತೆನ್ನುವುದು ಪಾಷಂಡ ವಾದವೆಂದು ಅಪೋಸ್ತಲರು ಪ್ರಕಟಪಡಿಸಿರುತ್ತಾರೆ. ಎಲ್ಲಿಯವರೆಗೆ ಅಬ್ರಹಾಮನ ವಿಶ್ವಾಸದಲ್ಲಿ ಸತ್ತವರೆಲ್ಲರೂ ಮರಣದ ಹಿಡಿತದಲ್ಲಿರುತ್ತಾರೋ ಅಲ್ಲಿಯವರೆಗೂ ಸರ್ಪದ ತಲೆ ಜಜ್ಜಲ್ಪಟ್ಟಿರುವುದಿಲ್ಲ. ಕ್ರಿಸ್ತನು ಇಲ್ಲಿದ್ದ ಕಾಲದಲ್ಲಿನ ಪ್ರಪಂಚವನ್ನು ನೋಡಿರಿ ಮತ್ತು ಈಗಿನವರೆಗೆ ಅದರ ಚರಿತ್ರೆಯನ್ನು ಗಮನಿಸಿ. ಈಗಿರುವಂತೆಯೇ ಅದನ್ನು ಅವಲೋಕಿಸಿ. ಸರ್ಪದ ತಲೆಯನ್ನು ಜಜ್ಜಿರುವುದಾಗಿ ಯಾರು ಹೇಳುತ್ತಾರೆ? ಪಾಪವೂ ಅದರಿಂದಾದ ಕೆಡುಕುಗಳೂ ಭೂಮಿಯಿಂದ ನಿವಾರಿಸಲ್ಪಟ್ಟಿದೆಯೆಂದು ಯಾರು ತಾನೇ ಹೇಳಲು ಸಾಧ್ಯ ? ಸ್ತ್ರೀಯ ಬೀಜವಾಗಿ ಕ್ರಿಸ್ತನು ಮಾಡಬೇಕಿದ್ದ ಒಂದು ಕಾರ್ಯವು ಇಲ್ಲಿದೆ. ಆತನು ಬಂದನು ; ಆತನು ಹೋದನು ; ಆದರೆ ಆತನು ಅದನ್ನು ಮಾಡಲಿಲ್ಲ. ಆತನಿಗೆ ವಹಿಸಿದ್ದ ಕಾರ್ಯವನ್ನು ಆತನು ಮಾಡಲು ಅಸಮರ್ಥನಾದನೆಂದು ನಾವು ಹೇಳೋಣವೇ ? ಇಲ್ಲ, ಖಂಡಿತವಾಗಿಯೂ ಇಲ್ಲ.

## ಆತನ ಉದ್ದಿಷ್ಟ ಕಾರ್ಯವು ಭಾಗಶಃ ನೆರವೇರಿಲ್ಲ.

ಪುನಃ ನಾವು ಹಿಂದಕ್ಕೆ ಹೋಗಿ, ದೇವರ ಮಹಿಮೆಯು ಭೂಮಿಯ ಮೇಲೆಲ್ಲಾ ತುಂಬಿಕೊಳ್ಳುವುದಾಗಿ ಓದುತ್ತೇವೆ. ಯಾರಿಂದ ಮತ್ತು ಯಾರ ದೆಸೆಯಿಂದ ಎಲ್ಲಾ

ವಸ್ತುಗಳೂ ಉಂಟಾದವೋ ಆ ಕ್ರಿಸ್ತನಲ್ಲಿ ಮತ್ತು ಆತನ ಮೂಲಕ ಈ ಆಶ್ಚರ್ಯಕರವಾದ ಕಾರ್ಯವು ನಡೆಸ ಬೇಕಾಗಿರುತ್ತದೆಂಬುದನ್ನು ಅನೇಕ ವಾಕ್ಯಗಳಿಂದ ನಾವು ದೃಢಪಡುತ್ತೇವೆ. ಹತ್ತೊಂಭತ್ತು ಶತಮಾನಗಳ ಹಿಂದೆ ಆತನು ಇಲ್ಲಿದ್ದಾಗ ದೇವರ ಮಹಿಮೆಯಿಂದ ಈ ಭೂಮಿಯನ್ನು ಆತನು ತುಂಬಿದನೇ ? ಇಲ್ಲ, ನಿಜವಾಗಿಯೂ ಇಲ್ಲ. ಈ ಪ್ರಪಂಚವು ಆತನ ಕೈಗೆ ಒಪ್ಪಿಸಲ್ಪಡಬೇಕು ಮತ್ತು ಆತನು ಭೂಮಿಯ ಎಲ್ಲಾ ಜನಾಂಗಗಳನ್ನು ಆಶೀರ್ವದಿಸುತ್ತಾನೆಂದು ನಾವು ವಾಗ್ದತ್ತದ ಒಡಂಬಡಿಕೆಗಳಲ್ಲಿ ನೋಡುತ್ತೇವೆ. ಆತನು ಬಂದನು, ಆದರೆ ಭೂಮಿಯ ಎಲ್ಲಾ ಜನಾಂಗಗಳೂ ಆಶೀರ್ವದಿಸಲ್ಪಡಲಿಲ್ಲ. ದಾವೀದನೊಂದಿಗೆ ಮಾಡಿದ ಒಡಂಬಡಿಕೆ ಏನೆಂದರೆ, ದೇವರು ಕ್ರಿಸ್ತನಿಗೆ ಆತನ ಸಿಂಹಾಸನವನ್ನು ಕೊಡುತ್ತಾನೆಂಬುದು ಮತ್ತು ಯಾಕೋಬನ ಮನೆಯ ಮೇಲೆ ಆತನು ಎಂದೆಂದಿಗೂ ಆಳುವನು. ಆದರೆ ಇಂದು ಯಾಕೋಬನ ಮನೆಯು ಯಾವ ಸ್ಥಿತಿಯಲ್ಲಿದೆ ? ಕ್ರಿಸ್ತನ ಆಳ್ವಿಕೆ ಇದೆಯೇ ? ಕ್ರಿಸ್ತನನ್ನು ಅವರು ತಮ್ಮ ರಾಜನೆಂದು ಅಂಗೀಕರಿಸಿದ್ದಾರೆಯೇ ? ಇನ್ನೂ ದಾವೀದನ ಸಿಂಹಾಸನವು ಪಾಳು ಬಿದ್ದಿದೆ. ಕ್ರಿಸ್ತನು ಇಲ್ಲಿದ್ದನು ಮತ್ತು ಹೋದನು. ಒಡಂಬಡಿಕೆಯು ನೆರವೇರಲಿಲ್ಲ. ಅದು ಎಂದಿಗೂ ನೆರವೇರುವುದಿಲ್ಲವೇ ? ದೇವರ ವಾಗ್ದಾನಗಳು ನಿರರ್ಥಕವಾಗುತ್ತವೆಂದು ಯಾರುತಾನೇ ಧೈರ್ಯದಿಂದ ಹೇಳಿಯಾರು ? ನಾವು ಪುನಃ ಹಿಂದಕ್ಕೆ ಮೋಶೆಯ ಬಳಿಗೆ ಹೋಗೋಣ ಮತ್ತು ಅವನು ಪ್ರಕಟಿಸುವುದನ್ನು ಕೇಳೋಣ—"ದೇವರಾಗಿರುವ ಕರ್ತನು ನನ್ನನ್ನು ಏರ್ಪಡಿಸಿದಂತೆಯೇ ಮತ್ತೊಬ್ಬ ಪ್ರವಾದಿಯನ್ನು ಎಬ್ಬಿಸುವನು. ಎಲ್ಲಾ ವಿಷಯಗಳಲ್ಲಿಯೂ ನೀವು ಆತನಿಗೆ ಕಿವಿಗೊಡಬೇಕು." ಆ ಪ್ರವಾದಿಯು ಬಂದನು, ಮತ್ತು ಇಸ್ರಾಯೇಲ್ಯರಿಗೆ ಕಾಣಿಸಿಕೊಂಡನು. ಆತನಿಗೆ ಅವರು ಕಿವಿಗೊಟ್ಟರೆ ? ಇಲ್ಲ. ಅವರು ಇನ್ನೂ ಅವನನ್ನು ಕೇಳಿಸಿಕೊಂಡಿಲ್ಲ. "ಇಸ್ರಾಯೇಲ್ಯರಿಗೆ ಭಾಗಶಃ ಕುರುಡಾಯಿತು." ಮತ್ತು ಕ್ರಿಸ್ತನು ಅವರಿಗೆ "ಎಡವುವ ಕಲ್ಲೂ ಮುಗ್ಗರಿಸುವ ಬಂಡೆಯೂ ಆದನು." ಆದರೆ ಮೋಶೆಯು ಅವರು ಎಲ್ಲಾ ವಿಷಯದಲ್ಲಿ ಅವನಿಗೆ ಕಿವಿಗೊಡಬೇಕೆಂದು ಹೇಳಿದನು —ಮೋಶೆಯು ಏನು ಮಾಡಿದನೋ ಅದನ್ನು ಮಾಡಲು ಮೋಶೆಯಂತೆಯೇ ಅವನೂ ಒಬ್ಬ ಪ್ರವಾದಿಯಾಗ ಬೇಕಾಯಿತು. ಮೋಶೆಯು ಹೇಗೆ ಇಸ್ರಾಯೇಲ್ಯರಿಗೆ ಕಾಣಿಸಿಕೊಂಡು, ಒಂದು ಕಾಲ ನಿರಾಕರಿಸಲ್ಪಟ್ಟಂತೆಯೇ ಕ್ರಿಸ್ತನೂ ಕೂಡ ಇಸ್ರಾಯೇಲ್ಯರಿಗೆ ಕಾಣಿಸಿಕೊಂಡು ನಿರಾಕರಿಸಲ್ಪಟ್ಟನು. ಮೋಶೆಯು ಮಾಡಿದಂತೆ ಆತನು ಇನ್ನೂ ಮಾಡಬೇಕಿದ್ದ ಇಸ್ರಾಯೇಲ್ಯರನ್ನು ವಿಮೋಚಿಸುತ್ತಾನೋ ? ಎಲ್ಲಾ ವಿಷಯಗಳಲ್ಲಿ ಅವರು ಆತನಿಗೆ ಕಿವಿಗೊಡುವ ಒಬ್ಬ ಪ್ರವಾದಿಯಾಗುತ್ತಾನೋ ? ಆತನು ಆಗಲೇ ಬೇಕು ಅಥವಾ ದೇವರ ವಾಕ್ಯಗಳ ಸತ್ಯವು ಮುರಿದು ಬೀಳುತ್ತದೆ. ಮತ್ತು ದೇವರ ವಾಕ್ಯವು ನಿರರ್ಥಕವಾಗುತ್ತದೆ.—ಅದು ಅಸಾಧ್ಯ. ಒಬ್ಬ ಮಗನು ಹುಟ್ಟುವನೆಂದೂ, ಒಂದು ಮಗುವು ಕೊಡಲ್ಪಡುತ್ತದೆಂದೂ, ಆತನು ಸಮಾಧಾನದ ಪ್ರಭುವೆಂದೂ ಆತನ ರಾಜ್ಯಾಧಿಕಾರದ ಅಭಿವೃದ್ಧಿಗೂ ಮತ್ತು ಸಮಾಧಾನಕ್ಕೂ ಅಂತ್ಯವಿಲ್ಲವೆಂದೂ, ದಾವೀದನ ಸಿಂಹಾಸನದ ಮೇಲೆಯೂ, ಆತನ ರಾಜ್ಯದ ಮೇಲೆಯೂ ಅವನನ್ನು

ಸ್ಥಾಪಿಸಿ, ಇಂದಿನಿಂದ ಯಾವಾಗಲೂ ನೀತಿನ್ಯಾಯಕ್ಕೆ ದೃಢ ಮಾಡುವುದಕ್ಕೆಂದೂ ನಾವು ಯೆಶಾಯನ ಪ್ರವಾದನೆಯಿಂದ ತಿಳಿಯುತ್ತೇವೆ (ಯೆಶಾಯ 9:6–7). ಆತನು ಬಂದಾಗ ಈ ವಾಗ್ದಾನಗಳ ನೆರವೇರುವಿಕೆಗಾಗಿ ಯಾರ ಹೃದಯಗಳು ಕಾದಿದ್ದವೋ ಅವರು ಆತನು ಅವುಗಳನ್ನು ನೆರವೇರಿಸುವನೆಂದು ನಂಬಿದ್ದರು. ದೇವರು ಪ್ರಮಾಣ ಮಾಡಿದ್ದರ ನೆರವೇರುವಿಕೆಯನ್ನು ನಿರೀಕ್ಷಿಸಲು ಅವರಿಗೊಂದು ಹಕ್ಕಿತ್ತು ; ಮತ್ತು ಕ್ರಿಸ್ತನೊಬ್ಬನೇ ಅವುಗಳನ್ನು ನೆರವೇರಿಸುವಂಥವನು ಎಂದು ನಿರೀಕ್ಷಿಸುವದಕ್ಕೂ ಅವರಿಗೆ ಹಕ್ಕಿತ್ತು. ಯಾಕಂದರೆ ಆತನ ವ್ಯಕ್ತಿತ್ವದ ಬಗ್ಗೆ ಅವರು ತಪ್ಪಾಗಿ ಭಾವಿಸಿರಲಿಲ್ಲ. ನಿಶ್ಚಯವಾಗಿಯೂ ಆತನು ಸ್ತ್ರೀಯ ಬೀಜ (ಸಂತತಿ)ವಾಗಿದ್ದನು : ಆತನು ಮೋಶೆಯಂತೆಯೇ ಒಬ್ಬ ಪ್ರವಾದಿಯಾಗಿದ್ದನು, ದಾವೀದನ ಪಾಳುಬಿದ್ದ ಸಿಂಹಾಸನವನ್ನು ಕಟ್ಟಿ ಯಾಕೋಬನ ಮನೆಯ ಮೇಲೆಲ್ಲಾ ಯಾರು ಆಳ್ವಿಕೆ ಮಾಡುತ್ತಾರೋ ಆತನು ದಾವೀದನ ಬೀಜ (ಸಂತತಿ)ವಾಗಿದ್ದನು. ಆತನೇ ಆ ವ್ಯಕ್ತಿಯೆಂದು ಅವರು ದೃಢವಾಗಿದ್ದರು. ಆತನಲ್ಲಿರಬೇಕಾದ ಎಲ್ಲಾ ಅಗತ್ಯವಾದ ವ್ಯಕ್ತಿತ್ವದ ಗುರುತುಗಳಿದ್ದವು. ನಾನು ಮತ್ತೆ ಹೇಳುತ್ತೇನೆ—ಮುಂತಿಳಿಸಿದ ಸಂಗತಿಗಳನ್ನು ಆತನು ನೆರವೇರಿಸುತ್ತಾನೆಂದು ಅವರು ಈ ವಾಗ್ದಾನಗಳಿಂದಲೂ ಮತ್ತು ಪ್ರವಾದನೆಗಳಿಂದಲೂ ನಿರೀಕ್ಷಿಸಲು ಅವರಿಗೆ ಒಂದು ಹಕ್ಕಿತ್ತು. ಅವರನ್ನು ಅಕ್ಷೇಪಿಸಿ, ಅವರಿಗೆ ಯಾರಾದರೂ ಈ ರೀತಿ, "ಅಂತಹ ವಿಷಯಗಳನ್ನು ನಿರೀಕ್ಷಿಸಲು ನಿಮಗೆ ಹಕ್ಕಿಲ್ಲ"ಎಂದು ಪ್ರಶ್ನಿಸಿದಲ್ಲಿ ಅವರು ತಕ್ಷಣವೇ ಅವರಿಗೆ ಸೂಚಿಸುತ್ತಿದ್ದರು—ದೇವರು ಹೀಗೆ ಹೇಳಿದ್ದಾನೆ ; "ಆ ಸ್ತ್ರೀಯ ಸಂತಾನವು ಸರ್ಪದ ತಲೆಯನ್ನು ಜಜ್ಜುವದು–ನಿನಗೂ ನಿನ್ನ ಸಂತಾನಕ್ಕೆ ನಿರಂತರ ಸ್ವಾಸ್ತ್ಯಕ್ಕಾಗಿ ಈ ದೇಶವನ್ನು ನಾನು ಕೊಡುತ್ತೇನೆ; ಮತ್ತು ನಿನ್ನ ಸಂತತಿಯಿಂದ ಭೂಮಿಯ ಎಲ್ಲಾ ಕುಲದವರೂ ಆಶೀರ್ವದಿಸಲ್ಪಡುವರು," ನಿನ್ನ ಕರ್ತನಾದ ದೇವರು ನಿಮಗೆ ಒಬ್ಬ ಪ್ರವಾದಿಯನ್ನು ಎಬ್ಬಿಸುವನು ; ಎಲ್ಲಾ ವಿಷಯಗಳಲ್ಲಿ ನೀವು ಅವನಿಗೆ ಕಿವಿಗೊಡಬೇಕು." "ತಾನು ಜೀವಿಸಿರುವುದು ಎಷ್ಟು ಸತ್ಯವೋ ಅಂತೆಯೇ ಯೆಹೋವನ ಮಹಿಮೆಯಿಂದ ತುಂಬಿರುವುದು". "ಯೆಹೋವನು ದಾವೀದನಿಗೆ ಸತ್ಯದ ಆಣೆ ಇಟ್ಟಿದ್ದಾನೆ, ಅದರಿಂದ ತಿರಿಗಿಕೊಳ್ಳನು—ನಿನ್ನ ಹೊಟ್ಟೆಯ ಫಲವನ್ನು ನಿನ್ನ ಸಿಂಹಾಸನದ ಮೇಲೆ ಇರಿಸುವೆನು" ಈ ಬಗ್ಗೆ ದಾವೀದನು "ಇದೇ ತನ್ನ ಎಲ್ಲಾ ರಕ್ಷಣೆಯಾಗಿದೆ. ಮತ್ತು ತನ್ನ ಎಲ್ಲಾ ಅಪೇಕ್ಷೆಯಾಗಿದೆ"ಯೆಂದು ಹೇಳುತ್ತಾನೆ. ಯೆಶಾಯನ ಪ್ರವಾದನೆಯನ್ನು ತೋರಿಸಿ ಅವರು ಕೇಳಬಹುದು—"ಹುಟ್ಟುವಂಥಾ ಈ ಮಗು ಯಾರು? ಕೊಡುವಂಥಾ ಆ ಮಗನು ಯಾರು ?" ಅದಕ್ಕೆ ಕೊಡಬೇಕಾದ ಒಂದೇ ಉತ್ತರವೆಂದರೆ, ಬೆತ್ಲೆಹೇಮಿನಲ್ಲಿ ಯಾರು ಹುಟ್ಟಬೇಕಿತ್ತೋ ಅವನೇ ಆಗಿರುತ್ತಾನೆ. ಒಳ್ಳೇದು, ಹಾಗಾದರೆ, ಅವರು ಹೇಳುತ್ತಾರೆ—ಆ ಮಗನಿಗೆ, ಆ ಮಗುವಿಗೆ, ದಾವೀದನ ಸಿಂಹಾಸನವನ್ನು ಕೊಡಬೇಕು ; ಅವನು ಯಾಕೋಬನ ಮನೆಯ ಮೇಲೆಲ್ಲಾ ಆಳಬೇಕು, ಯಾಕೆಂದರೆ ಅದೇ ವಚನದಲ್ಲಿ "ಅಧಿಕಾರವು ಅವನ ಹೆಗಲಿನ ಮೇಲಿರುವುದು, ಆತನು ಸಮಾಧಾನದ ಪ್ರಭುವು, ದಾವೀದನ

ಸಿಂಹಾಸನದ ಮೇಲೆಯೂ ಅವನ ರಾಜ್ಯದ ಮೇಲೆಯೂ ಅದನ್ನು ಸ್ಥಾಪಿಸಿ ಇಂದಿನಿಂದ ಸದಾಕಾಲಕ್ಕೆ ನೀತಿನ್ಯಾಯಗಳಲ್ಲಿ ದೃಢ ಮಾಡುವ ಬಗ್ಗೆ ಅದರ ರಾಜ್ಯಾಧಿಕಾರದ ಅಭಿವೃದ್ಧಿಗೂ ಸಮಾಧಾನಕ್ಕೂ ಅಂತ್ಯವಿರುವುದಿಲ್ಲ." ಆತನೊಬ್ಬನೇ ಈ ಮಹತ್ತಾದ ವಾಗ್ದಾನಗಳನ್ನು ನೆರವೇರಿಸುವವನೆಂದು ಅವರು ನಿರೀಕ್ಷಿಸದೆ ಇನ್ನೇನು ಮಾಡಲು ಸಾಧ್ಯ ? ಎಲ್ಲಿ ತಪ್ಪಾಗಿದೆ ? ಆತನು ಅವುಗಳನ್ನು ನೆರವೇರಿಸ ಲಿಲ್ಲ, ಆತನು ವಿಫಲನಾದನೇ ? ನಿಜವಾಗಿಯೂ ಇಲ್ಲ. ಎಲ್ಲಿಯೋ ಒಂದು ತಪ್ಪಾಗಿರಬೇಕು. ಎಲ್ಲಿ ಅದು ? ಕ್ರಿಸ್ತನು ಭೂಮಿಗೆ ಹಿಂದಿರುಗಿ ಪ್ರಜ್ವಲಿಸುವ ಈ ಸತ್ಯವೇದ ವಾಕ್ಯಗಳನ್ನು ನೆರವೇರಿಸದಿದ್ದರೆ, ಅದೊಂದು ಎಂದೆಂದಿಗೂ ಸರಿಪಡಿಸ ಲಾಗದ ತಪ್ಪಾಗುತ್ತದೆ. ಒಬ್ಬ ಸಮಾಧಾನದ ಪ್ರಭುವೆಂದು ಆತನು ಕರೆಯಲ್ಪಟ್ಟಿ ದ್ದಾನೆ. ನೀತಿಯ ಅಧಿಕಾರದ ಮತ್ತು ನ್ಯಾಯದ ಆಳ್ವಿಕೆಯನ್ನು ನಡೆಸುವ ಒಬ್ಬ ರಾಜ ಮತ್ತು ಆತನ ಜನನದ ನಿರೀಕ್ಷಣೆಯಲ್ಲಿ ಮರಿಯಳು ಪ್ರವಾದನಾ ರೂಪದಲ್ಲಿ ಕೂಗುತ್ತಾಳೆ. "ಅವನು ತನ್ನ ಭುಜದಿಂದ ತ್ರಾಣವನ್ನು ತೋರಿಸಿ, ಅವರ ಹೃದಯದ ಆಲೋಚನೆಯಿಂದ ಗರ್ವಿಷ್ಟರನ್ನು ಚದರಿಸಿದ್ದಾನೆ, ಪ್ರಭುಗಳನ್ನು ಸಿಂಹಾಸನಗಳಿಂದ ದೊಬ್ಬಿಹಾಕಿ, ದೀನರನ್ನು ಎತ್ತಿದ್ದಾನೆ, ಹಸಿದವರನ್ನು ಒಳ್ಳೆಯವು ಗಳಿಂದ ತುಂಬಿಸಿ, ಐಶ್ವರ್ಯವಂತರನ್ನು ಬರೀದಾಗಿ ಕಳುಹಿಸಿ ಬಿಟ್ಟಿದ್ದಾನೆ. ನಮ್ಮ ತಂದೆಗಳಾದ ಅಬ್ರಹಾಮನಿಗೂ ಸದಾಕಾಲ ಇರುವ ಅವನ ಬೀಜ (ಸಂತತಿ)ಕ್ಕೂ ಅವನು ಮಾತಾಡಿದ ಮೇರೆಗೆ ಕರುಣೆಗಳನ್ನು ಜ್ಞಾಪಕ ಮಾಡಿಕೊಂಡು, ತನ್ನ ಸೇವಕನಾದ ಇಸ್ರಾಯೇಲನನ್ನು ಆದರಿಸಿದ್ದಾನೆ. (ಹಳೇ ಭಾಷಾಂತರ ಲೂಕ 1:51-55). ಈ ಪ್ರವಾದನೆಗಳು ಆತನ ಮೂಲಕವೇ ನೆರವೇರುತ್ತದೆಂದು ಜಕರೀಯನು ನೋಡಿದನು ಮತ್ತು ಹೀಗೆ ಹೇಳಿದನು ; ಇಸ್ರಾಯೇಲನ ದೇವರಾದ ಕರ್ತನು ಸ್ತುತಿಸತಕ್ಕವನು ; ಯಾಕೆಂದರೆ ಅವನು ತನ್ನ ಜನರನ್ನು ದರ್ಶಿಸಿ ಅವರಿಗೆ ವಿಮೋಚನೆ ಮಾಡಿ ತನ್ನ ಸೇವಕನಾದ ದಾವೀದನ ಮನೆಯಲ್ಲಿ ನಮಗೆ ರಕ್ಷಣೆಯ ಕೊಂಬನ್ನು ಏರಿಸಿದ್ದಾನೆ. ಲೋಕಾದಿಯಿಂದಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ತಾನು ಮಾತಾಡಿದ ಹಾಗೆ ನಮ್ಮ ಶತ್ರುಗಳಿಂದಲೂ ನಮ್ಮನ್ನು ಹಗೆ ಮಾಡುವವರೆಲ್ಲರ ಕೈಯಿಂದಲೂ ನಮ್ಮನ್ನು ರಕ್ಷಿಸಿ, ನಮ್ಮ ತಂದೆಗಳಿಗೆ ಕರುಣೆ ಮಾಡಿ, ತನ್ನ ಪರಿಶುದ್ಧ ಒಡಂಬಡಿಕೆಯನ್ನೂ, ನಮ್ಮ ತಂದೆಯಾದ ಅಬ್ರಹಾಮನಿಗೆ ಇಟ್ಟುಹೋದ ಆಣೆಯನ್ನೂ ಜ್ಞಾಪಕ ಮಾಡಿಕೊಂಡಿದ್ದಾನೆ." (ಹಳೆ ಭಾಷಾಂತರ ಲೂಕ 1;68-72). ಆತನ ಜನನದಲ್ಲಿ ದೇವದೂತರು ಕಾಣಿಸಿಕೊಂಡು, ಸಮಾಧಾನದ ಪ್ರಭುವೆಂದು ಆತನನ್ನು ಗುರುತಿಸಿದರು ಮತ್ತು ಪರಲೋಕ ಸೈನ್ಯದ ಒಂದು ಸಮೂಹವು ದೇವರನ್ನು ಕೊಂಡಾಡುತ್ತಾ, "ಮಹೋನ್ನತವಾದವುಗಳಲ್ಲಿ ದೇವರಿಗೆ ಮಹಿಮೆಯು ! ಭೂಮಿಯ ಮೇಲೆ ಸಮಾಧಾನವು ಮನುಷ್ಯರಲ್ಲಿ ದಯವು !" ಅಂದರು. ಸಮಾಧಾನದ ಪ್ರಭುವು ಇಲ್ಲಿದ್ದಾನೆ. ಭೂಮಿಯ ಮೇಲೆ ಸಮಾಧಾನವು ! ಮನುಷ್ಯರಲ್ಲಿ ದಯವನ್ನು ತರುವ ಒಬ್ಬನಾದ ಅವನನ್ನು ಪ್ರಕಟಿಸುವ

ದೇವದೂತರ ಶಬ್ದಗಳು ಇಲ್ಲಿವೆ. ನಾವು ಅವರನ್ನು ಹಿಂಬಾಲಿಸುತ್ತೇವೆ, ಮಗುವು ಹುಟ್ಟಿರುವುದನ್ನು ನೋಡುತ್ತೇವೆ, ಮಗನನ್ನು ಕೊಟ್ಟಿದೆ; ಆತನು ಆತ್ಮದಲ್ಲಿಯೂ ಜ್ಞಾನದಲ್ಲಿಯೂ ವೃದ್ಧಿಯಾಗುವುದನ್ನು ನಾವು ಗಮನಿಸುತ್ತೇವೆ; ಹನ್ನೆರಡನೇ ವಯಸ್ಸಿನಲ್ಲಿ ದೇವಾಲಯದಲ್ಲಿ ಬೋಧಕರನ್ನು ದಿಗ್ಭ್ರಮೆಗೊಳಿಸುತ್ತಿರುವ ಆತನನ್ನು ಕೇಳುತ್ತಿರುತ್ತೇವೆ; ತನ್ನ ಹಸ್ತಕ್ಕೆ ವಹಿಸಿರುವ ಮಹೋದ್ದೇಶದ ಬಗ್ಗೆ ಆತನಿಗೆ ಎಂತಹ ಉನ್ನತವಾದ ಅಭಿಪ್ರಾಯ ಇತ್ತೆಂಬುದನ್ನು ತೋರಿಸುತ್ತಾ, "ನಾನು ನನ್ನ ತಂದೆಯ ಕಾರ್ಯಗಳಲ್ಲಿ ಇರಬೇಕೆಂಬುದು ನಿಮಗೆ ತಿಳಿಯಲಿಲ್ಲವೋ" ಎಂದು ಆತನು ಈ ಬಾಲ್ಯ ವಯಸ್ಸಿನಲ್ಲಿ ಹೇಳುವುದನ್ನು ನಾವು ಕೇಳುತ್ತೇವೆ. ಮೂವತ್ತನೆಯ ವಯಸ್ಸಿನಲ್ಲಿ ಆತನ ಮುಂದೂತನಾದ ಯೋಹಾನನು, "ಇಗೋ! ಲೋಕದ ಪಾಪವನ್ನು ಹೊತ್ತುಕೊಂಡು ಹೋಗುವ ದೇವರ ಕುರಿಮರಿಯು!" ಎಂಬುದಾಗಿ ಆತನನ್ನು ಸಾರ್ವಜನಿಕ ಜೀವಿತಕ್ಕೆ ಸಾರಿದನು. ಈ ಮನುಷ್ಯನು ಮಾತಾಡಿದಂತೆ ಯಾವ ಮನುಷ್ಯನೂ ಮಾತಾಡಲಿಲ್ಲ. ತನ್ನ ಜೀವಿತದ ಎಲ್ಲಾ ಮಹತ್ಕಾರ್ಯಗಳಲ್ಲಿ ಆತನು ಅದ್ಭುತನಾಗಿದ್ದನು. ನಿಜವಾಗಿಯೂ ಈತನೇ ಸಮಾಧಾನದ ಪ್ರಭುವಾಗಿದ್ದನು; ನಿಜವಾಗಿಯೂ ಈತನೇ ಭೂಮಿಯಮೇಲೆ ಸಮಾಧಾನ, ಮನುಷ್ಯರೊಳಗೆ ದಯೆಯನ್ನು ತರುವಂತಹವನಾಗಿದ್ದಾನೆ. ಪುರಾತನ ಪ್ರವಾದಿಗಳಿಗೆ ಹೃದಯಗಳನ್ನು ಸಂತೋಷದ ನಿರೀಕ್ಷೆಯಲ್ಲಿ ಉರಿಸಿದ ಈ ಸ್ಫೂರ್ತಿದಾಯಕ ಪ್ರವಾದನೆಗಳನ್ನು ಅರಿಯುವ ಕಾಲದಷ್ಟು ಮಾತ್ರ ನಾವು ಕಾಯಬೇಕಾಗಿದೆ. ಅಂಥಹ ನೆರವೇರುವಿಕೆಯಿಂದ ಪ್ರಪಂಚವನ್ನು ರೋಮಾಂಚನಗೊಳಿಸುವ ಸಂತೋಷದಿಂದ ತುಂಬಿದ ಭಾವಾವೇಶದ ನಿರೀಕ್ಷೆಯಲ್ಲಿ ಆತನನ್ನು ಅನುಸರಿಸಲು ಮುಂದುವರಿಯುತ್ತೇವೆ. ಉಪದ್ರವದಿಂದ ಕೂಡಿದ ಪ್ರಪಂಚಕ್ಕೆ ಸಮಾಧಾನ—ಸವಿಯಾದ ಸಮಾಧಾನಕ್ಕಾಗಿ ನಾವು ತುದಿಗಾಲಲ್ಲಿ ಎದುರುನೋಡುತ್ತಾ ಕೇಳುತ್ತಿರುತ್ತೇವೆ. ಕೊನೆಯಲ್ಲಿ ಆತನು "ಭೂಮಿಯ ಮೇಲೆ ಸಮಾಧಾನವನ್ನು ಹಾಕಬಂದೆನೆಂದು ನೆನಸಬೇಡಿರಿ; ಸಮಾಧಾನವನ್ನಲ್ಲ ಕತ್ತಿಯನ್ನು ಹಾಕಬಂದೆನು. ಹ್ಯಾಗೆಂದರೆ, ಮನುಷ್ಯನನ್ನು ಅವನ ತಂದೆಗೂ, ಮಗಳನ್ನು ಅವಳ ತಾಯಿಗೂ, ಸೊಸೆಯನ್ನು ಅವಳ ಅತ್ತೆಗೂ ಅಗಲಿಸುವುದಕ್ಕೆ ಬಂದೆನು. ಮತ್ತು ಮನುಷ್ಯನ ಮನೆಯವರೇ ಅವನ ಶತ್ರುಗಳಾಗುವರು" ಎಂದು ಹೇಳುವುದನ್ನು ನಾವು ಕೇಳುತ್ತೇವೆ (ಮತ್ತಾಯ 10;34-36). ನಮ್ಮ ಎಲ್ಲಾ ಭರವಸೆಗಳನ್ನೂ ಮತ್ತು ನಿರೀಕ್ಷೆಗಳನ್ನೂ ಮಣ್ಣುಗೂಡಿಸುವ ಒಂದು ಹೊಡೆತವು ಇಲ್ಲಿದೆ. ನಾವೇನು ಮಾಡೋಣ? ನಾವು ಎದ್ದು ಆತನನ್ನು ಕೇಳೋಣ, "ನೀನು ಭೂಮಿಯ ಮೇಲೆ ಸಮಾಧಾನವನ್ನೂ ಮತ್ತು ಮನುಷ್ಯರೊಳಗೆ ದಯೆಯನ್ನೂ ತರುವುದಕ್ಕಾಗಿಯೇ ಅಲ್ಲವೇ ಬಂದದ್ದು?" ಭೂಮಿಯ ಜನಾಂಗದವರನ್ನು ಆಶೀರ್ವದಿಸಿ, ನೀರು ಸಮುದ್ರವನ್ನು ಹೇಗೆ ಆವರಿಸಿಕೊಳ್ಳುತ್ತದೋ ಹಾಗೆ ದೇವರ ಮಹಿಮೆಯು ಪ್ರಪಂಚವನ್ನೆಲ್ಲಾ ತುಂಬಿಸುವ ಪ್ರಭುವು ನೀನಲ್ಲವೋ? ದೇವರ

ವಾಕ್ಯವು ನಿರರ್ಥಕವಾದದ್ದೋ ? ರೋಮನ್ನರ ಭಾರವಾದ ನೊಗದ ದಬ್ಬಾಳಿಕೆ ಹಾಗೂ ದಾಸತ್ವದಲ್ಲಿ ಕೂಗುತ್ತಿರುವ ಇಸ್ರಾಯೇಲ್ಯರು ಇಲ್ಲಿದ್ದಾರೆ ; ಬಿಡುಗಡೆಗಾಗಿ ನಿನ್ನನ್ನು ನೋಡುತ್ತಿದ್ದಾರೆ ; ನೀನೇ ಅವರ ವಿಮೋಚಕನೆಂದು ಹಳೆಯ ಪ್ರವಾದಿಗಳು ನಮಗೆ ತಿಳಿಸಿದ್ದಾರೆ. ಇವೆಲ್ಲವೂ ನಿರರ್ಥಕವಾದವುಗಳೇ ? ಪುನಃ ಆತನು ಅಧೈರ್ಯದಿಂದ ಹಾಗೂ ನಿರಾಶೆಯಿಂದ ತುಂಬುವಂಥ ಮಾತುಗಳಿಂದ ನಮಗೆ ಉತ್ತರ ಕೊಡುತ್ತಾನೆ. ಸಮಾಧಾನದ ಮಾತುಗಳಿಗೆ ಬದಲಾಗಿ ಆತನು ಯುದ್ಧದ ಮಾತುಗಳಾಡುತ್ತಾನೆ. ನರಳುತ್ತಿರುವ ಪ್ರಪಂಚಕ್ಕೆ ಸಾಂತ್ವನ ಮತ್ತು ಸೌಖ್ಯದ ಮಾತುಗಳಿಗೆ ಬದಲಾಗಿ ಅತಿಯಾದ ಉಪದ್ರವಗಳು ಬರುವ ಕಾಲಗಳನ್ನು ಮುಂತಿಳಿಸುತ್ತಾ ಹೀಗೆ ಹೇಳುತ್ತಾನೆ: "ಸೂರ್ಯ ಚಂದ್ರ ನಕ್ಷತ್ರಗಳಲ್ಲಿ ಲಕ್ಷಣಗಳೂ; ಭೂಮಿಯ ಮೇಲಿರುವ ಜನಾಂಗಗಳಿಗೆ ದಿಕ್ಕುಗಾಣದ ಸಂಕಟಗಳೂ ಇರುವವು ; ಸಮುದ್ರವೂ ತೆರೆಗಳೂ ಘೋಷಿಸುವವು ; ಜಗತ್ತಿಗೆ ಉಂಟಾಗುವ ಕಾರ್ಯಗಳ ಭಯದಿಂದಲೂ ನಿರೀಕ್ಷೆಯಿಂದಲೂ ಮನುಷ್ಯನ ಗುಂಡಿಗೆಯು ಕುಂದುವುದು ; ಯಾಕಂದರೆ ಆಕಾಶದ ಬಲಗಳು ಕದಲಿಸಲ್ಪಡುವವು ;" (ಲೂಕ 21 : 25-26) ಈಗ ನಾವೇನು ಮಾಡಬೇಕು ? ನಾನು ಈ ಪ್ರಶ್ನೆಯನ್ನು ಕೇಳುತ್ತೇನೆ—ನಾನು ಈ ಪ್ರಶ್ನೆಯನ್ನು ಒತ್ತಿ ಕೇಳುತ್ತೇನೆ—ನಾವೇನು ಮಾಡಬೇಕು ? ಕ್ರಿಸ್ತನು ಕಾಣಿಸಿಕೊಂಡನು ಮತ್ತು ಈ ವಾಗ್ದಾನಗಳು ಮತ್ತು ಪ್ರವಾದನೆಗಳು ನೆರವೇರಲಿಲ್ಲ. ಸಮಾಧಾನವನ್ನು ತರುವ ಬದಲು ಆತನು ಕತ್ತಿಯನ್ನು ಕಳುಹಿಸಿದನೆಂದು ಆತನು ಹೇಳುತ್ತಾನೆ ; ಪ್ರಪಂಚದ ಜನಾಂಗಗಳನ್ನು ಆಶೀರ್ವದಿಸುವ ಬದಲು ಜನಾಂಗ ಗಳಿಗೆ ದಿಗ್ಭ್ರಮೆಯಿಂದ ಕೂಡಿದ ಸಂಕಟಗಳಿರುತ್ತದೆಂದು ಆತನು ಹೇಳುತ್ತಾನೆ ; ದೇವರ ಮಹಿಮೆಯಿಂದ ಪ್ರಪಂಚವನ್ನು ತುಂಬಿಸುವ ಬದಲು, ಪ್ರಪಂಚವು ಹುಟ್ಟಿದಾಗಿ ನಿಂದಲೂ ಕಾಣದ ಅತಿ ಕಾರ್ಗತ್ತಲೆಯ ಯುಗದಲ್ಲಿ ನಡೆದು ಬಂದಿದೆ. ದಾವೀದನ ಸಿಂಹಾಸನದ ಮೇಲೆ ತೀರ್ಪು, ನ್ಯಾಯನೀತಿಗಳನ್ನು ಜಾರಿಗೆ ತಾರದೆ, ದಾವೀದನ ಸಿಂಹಾಸನ ಇನ್ನೂ ಪಾಳು ಬಿದ್ದಿದೆ ; ಇಸ್ರಾಯೇಲ್ಯರು ಕಿವಿಗೊಡಬೇಕಿದ್ದ ಮೋಶೆ ಯಂತಹ ಪ್ರವಾದಿಯಾಗದೇ, "ಅವನನ್ನು ತಕ್ಕೊಂಡು ಹೋಗಿರಿ, ನಮ್ಮ ಮೇಲೆ ಆಳಲು ಈ ಮನುಷ್ಯನು ನಮಗೆ ಬೇಡ" ಎಂದು ಕೂಗುತ್ತಾರೆ. ನಿರಂತರ ಬಾಧ್ಯಕ್ಕೆ ಅಬ್ರಹಾಮನಿಗೆ ವಾಗ್ದಾನ ಮಾಡಿದ ದೇಶವನ್ನು ಪಡೆದು, ಭೂಮಿಯ ಎಲ್ಲಾ ಜನಾಂಗ ದವರೂ ಆಶೀರ್ವಾದ ಹೊಂದುವ ಬದಲು, ಆ ದೇಶವು ಇನ್ನೂ ಆಶೀರ್ವಾದವನ್ನು ಹೊಂದಿಲ್ಲ. ಆ ದೇಶದಲ್ಲಿ ಇನ್ನೂ ಸಮಾಧಾನ, ಶಾಂತಿ ಇಲ್ಲ. ನೆರೆ ರಾಷ್ಟ್ರಗಳ ಯುದ್ಧ ಭೀತಿ ಇದ್ದೇ ಇದೆ. ಕ್ರೂರ ದಬ್ಬಾಳಿಕೆಯ ಹೊರೆಗಳ ಅಡಿಯಲ್ಲಿ ಎಲ್ಲಾ ಜನಾಂಗಗಳೂ ನರಳುತ್ತಿವೆ. ಕ್ರಿಸ್ತನು ಇಲ್ಲಿದ್ದನು; ಆತನು ಕಾಣಿಸಿಕೊಂಡನು, ಆತನು ಅದೃಶ್ಯನಾದನು ; ಅದರ ಹಿಂದೆಯೇ ಭೂಮಿಯಮೇಲೆ ಶವದ ವಸ್ತ್ರದಂತೆ ಅಂಧಕಾರ ಹಾಗೂ ವಿಷಣ್ಣಕರ ವಾದ ಛಾಯೆಯು ಕವಿದಿದೆ. ಒಂದು ದೈವ ಪ್ರಕೋಪದ ಹಿಂದೆ ಆತನು ತನ್ನ ಮುಖವನ್ನು ಅಡಗಿಸಿಕೊಂಡಿದ್ದಾನೆ ಎಲ್ಲವೂ ಒಂದು ನಿರರ್ಥಕವಾಗಿದೆಯೇ ? ಎಲ್ಲವೂ ನಿರರ್ಥಕವೇ ಎಂದು ನಾನು ಕೇಳುತ್ತೇನೆ. ಸತ್ಯವೇದವು ಒಂದು ಸುಳ್ಳಿನ ಕಂತೆ ಹಾಗೂ

ಮೋಸವೇ ? ಖಂಡಿತವಾಗಿಯೂ ಇಲ್ಲ, ಒಂದು ಸಾವಿರ ಸಾರಿಯೂ ಇಲ್ಲ. ಆದರೆ ಕ್ರಿಸ್ತನು ಅಲ್ಲಿಯೇ ಉಳಿದುಕೊಳ್ಳಲು ಹೋಗಿದ್ದಾನೆಯೇ ? ನಿಜವಾಗಿಯೂ ಅಕ್ಷರಶಃ ಈ ವಾಗ್ದಾನಗಳನ್ನು ನೆರವೇರಿಸಲು ಕ್ರಿಸ್ತನ ಹಿಂದಿರುಗುವಿಕೆಯು ಇಲ್ಲದಿದ್ದಲ್ಲಿ, ಆಗ ದೇವರ ವಾಕ್ಯವು ನಿರರ್ಥಕವಾಗುತ್ತಿತ್ತು. ಆತನ ಬಲಗಡೆಯಿರುವ ಮನುಷ್ಯನಾದ ಆತನ ಪ್ರಿಯನಾಗಿರುವ ಮಗನಿಂದ ನಿರರ್ಥಕವಾಯಿತೇ ? ನಿಜವಾಗಿಯೂ ಇಲ್ಲ. "ನಾನು ಬದುಕಿರುವುದು ಎಷ್ಟು ಸತ್ಯವೋ ಅಷ್ಟರ ಮಟ್ಟಿಗೆ ಭೂಲೋಕವೆಲ್ಲಾ ನನ್ನ ಮಹಿಮೆಯಿಂದ ತುಂಬಿರುವುದು ನನ್ನ ವಾಕ್ಯವು ನಿರರ್ಥಕವಾಗಿ ನನ್ನ ಬಳಿಗೆ ಹಿಂದಿರುಗದೆ, ನಾನು ಯಾವುದರಲ್ಲಿ ಮೆಚ್ಚುತ್ತೇನೋ ಅದನ್ನು ಮಾಡುವುದು ; ನಾನು ಯಾವುದರ ನಿಮಿತ್ತ ಅದನ್ನು ಕಳುಹಿಸಿದೆನೋ ಅದರಲ್ಲಿ ಸಫಲವಾಗುವುದು."

ಹಾಗಿದ್ದಲ್ಲಿ ತೊಂದರೆ ಎಲ್ಲಿ ? ಧರ್ಮಭ್ರಷ್ಟವಾದ ಮತೀಯ ಪ್ರಪಂಚದಲ್ಲಿ ತೊಂದರೆ ಇದೆ. ಅದು ಸತ್ಯದಿಂದ ದೂರವಾಗಿದೆ ಮತ್ತು ಕಟ್ಟುಕತೆಗಳಿಗೆ ಓಗೊಟ್ಟಿದೆ ಕ್ರಿಸ್ತನನ್ನೂ ಆತನ ಎಲ್ಲಾ ರಕ್ಷಿಸಲ್ಪಟ್ಟವರನ್ನೂ ಅವರ ನಿತ್ಯನಿವಾಸವಾದ ಪರಲೋಕಕ್ಕೆ ಕಳುಹಿಸಿ, ಈ ನಿಮ್ಮ ಸುಂದರ ಭೂಲೋಕದ ನಾಶನವನ್ನು ಮುಂತಿಳಿಸುವ ಒಂದು ಸಂಪ್ರದಾಯವನ್ನು ಜನರ ಮನಸ್ಸಿನಲ್ಲಿ ಒತ್ತುವಂತಹ ಕಟ್ಟುಕತೆಗಳಿಗೆ ಲಕ್ಷ್ಯ ಕೊಟ್ಟಿರುತ್ತಾರೆ, ಅದರಿಂದಾಗಿ ಈ ಎಲ್ಲಾ ಮಹತ್ತರ ವಾಗ್ದಾನಗಳಲ್ಲಿ ದೇವರ ವಾಕ್ಯ ವನ್ನು ನಿರರ್ಥಕಗೊಳಿಸಿದ್ದಾರೆ. ಆದರೆ, ಪ್ರಿಯ ಓದುಗನೇ, ಸತ್ಯವೇದವನ್ನು ಒಂದು ಸಂಕಷ್ಟದಿಂದ ಪಾರು ಮಾಡುವ ರೀತಿಯಲ್ಲಿ ಅದರ ಸತ್ಯವನ್ನು ಮತ್ತು ಅದರ ಕರ್ತೃವಿನ ಸತ್ಯಾಸತ್ಯತೆಯನ್ನು ಸಮರ್ಥಿಸಿ, ಅದನ್ನು ರಕ್ಷಿಸುವುದಕ್ಕೆ ಬರಲು ನಿನಗೆ ಮನಸ್ಸಿಲ್ಲವೋ? ಮತ್ತು ಹಿಂಜರಿಯದೆ ಆತನು ಇನ್ನೂ ಬರಲಿದ್ದಾನೆ ಎಂದು ಕೂಗು, ಪ್ರತಿಧ್ವನಿಸು· ಪುನರ್‌ಪ್ರತಿಧ್ವನಿಸು. ಕೊಯ್ಯಲ್ಪಡಲು ಕುರಿಮರಿಯಂತೆ ಹೋದವನಾದ ಆತನು ಯೂದಾಯದ ಸಿಂಹದಂತೆ ಪ್ರತ್ಯಕ್ಷನಾಗಿ, ಅಕ್ಷರಶಃ ಮತ್ತು ವಾಸ್ತವವಾಗಿ ಪುನಃ ಕಾಣಿಸಿ ಕೊಳ್ಳುವವನಾಗಿದ್ದಾನೆ. ಆಗ ಆತನು ಅಂತಿಮವಾಗಿ ಹಾಗೂ ಎಂದೆಂದಿಗೂ ಸರ್ಪದ ತಲೆಯನ್ನು ಜಜ್ಜುವನು ; ಮತ್ತು ಕೊನೆಯದಾಗಿ ಕೆಡುಕಿನ ಕಡೇ ಕುರುಹು ಭೂಲೋಕ ದಿಂದ ತೆಗೆದು ಹಾಕಲ್ಪಡುತ್ತದೆ ; ಆಗ ಆತನು ತನ್ನ ಶತ್ರುಗಳ ಬಾಗಿಲನ್ನು ಹೊಂದಿದ ಅಬ್ರಹಾಮನ ಬೀಜ (ಸಂತತಿ)ವಾಗುತ್ತಾನೆ; ಮತ್ತು ಭೂಮಿಯ ಎಲ್ಲಾ ಜನಾಂಗಗಳ ವನ್ನು ಆಶೀರ್ವದಿಸುತ್ತಾನೆ ; ಆಗ ಆತನು ಮೋಶೆಯಂತಹ ಒಬ್ಬ ಪ್ರವಾದಿಯಾಗಿ ಎಲ್ಲಾ ವಿಷಯಗಳಲ್ಲಿ ಇಸ್ರಾಯೇಲ್ಯರು ಆತನಿಗೆ ಕಿವಿಗೊಡುವಂತಹವನಾಗಿರುತ್ತಾನೆ ; ಆಗ ಆತನು ದಾವೀದನ ಎಲ್ಲಾ ರಕ್ಷಣೆಯೂ ಅಭಿಲಾಷೆಯೂ ಆಗುತ್ತಾನೆ, ತನ್ನ ಸಿಂಹಾಸನದ ಮೇಲೆ ಕುಳಿತುಕೊಳ್ಳಲು ಒಬ್ಬನು ಎಬ್ಬಿಸಲ್ಪಡುತ್ತಾನೆಂದು ಒಬ್ಬ ಪ್ರವಾದಿಯಾಗಿ ದಾವೀದನು ತಿಳಿದಿದ್ದನು ; ಆ ದಾವೀದನ ಸಿಂಹಾಸನದ ಮೇಲೆ "ಅವನ ರಾಜ್ಯಾಧಿಕಾರದ ಅಭಿವೃದ್ಧಿಗೂ ಸಮಾಧಾನಕ್ಕೂ ಅಂತ್ಯವಿರುವುದಿಲ್ಲ" ಅನಂತರ ಆತನು 'ಸಮಾಧಾನದ ಪ್ರಭುವಾಗಿರುವನು ; "ಮಹೋನ್ನತವಾದವುಗಳಲ್ಲಿ ದೇವರಿಗೆ ಮಹಿಮೆಯು; ಭೂಮಿಯ ಮೇಲೆ ಸಮಾಧಾನವೂ ಮತ್ತು ಮನುಷ್ಯರೊಳಗೆ ದಯವೂ

ಎಂಬ ಪರಲೋಕದ ಸೈನ್ಯದ ಮಾತುಗಳು ಆನಂದದ ನೆರವೇರುವಿಕೆಯನ್ನು ಪಡೆಯುವವು. ಯೆಹೋವನು ಆಜ್ಞಾರ್ಥವಾಗಿ ಘೋಷಿಸಿದ್ದ "ನಾನು ಜೀವಿಸಿರುವುದು ಎಷ್ಟು ಸತ್ಯವೋ ಅಷ್ಟೇ ಸತ್ಯವಾಗಿ ಭೂಲೋಕವೆಲ್ಲಾ ನನ್ನ ಮಹಿಮೆಯಿಂದ ಕೂಡಿರುವುದು" ಎಂಬ ಮಾತುಗಳನ್ನು ಆಗ ಅರ್ಥ ಮಾಡಿಕೊಳ್ಳುತ್ತೇವೆ. ಆಗ ಆತನು ಮರಣವೆಂಬ ಕೊನೇ ಶತ್ರುವನ್ನು ನಾಶ ಮಾಡಿ. ಎಲ್ಲಾ ಶತ್ರುಗಳನ್ನು ತನ್ನ ಪಾದದ ಕೆಳಗೆ ಹಾಕುತ್ತಾನೆ. ಒಂದು ಮಹಾ ಸಮೂಹವಾಗಿ ಮಾರ್ಪಟ್ಟ ಪ್ರಪಂಚದ ವಿಮೋಚನೆಯು ಆತನ ಮೂಲಕ ಒಂದು ಸಂತೋಷಕರವಾದ ವಿಷಯವಾಗಿ ಪವಿತ್ರಾತ್ಮನ ಮೂಲಕ ದೇವರ ವಾಸಸ್ಥಾನವಾಗಿ, ದೇವರು ಸಮಸ್ತದಲ್ಲಿಯೂ ತಾನೇ ತಾನಾದಾಗ, ವಿಮೋಚನೆಗೊಂಡ ಈ ಪ್ರಪಂಚವು —"ಕರ್ತನ ಹೆಸರಿನಲ್ಲಿ ಬರುವವನಿಗೆ ಹೊಸನ್ನ (ಸ್ತೋತ್ರವಾಗಲಿ)" ಎಂದು ಕೂಗಿಕೊಳ್ಳುವರು (ಮತ್ತಾಯ 21:9).

ಹಳೇ ಒಡಂಬಡಿಕೆಯ ಅನೇಕ ವಾಕ್ಯಗಳಿಂದ ಮತ್ತೂ ಉಲ್ಲೇಖಿಸಿ ಕ್ರಿಸ್ತನ ಹಿಂದಿರುಗುವಿಕೆಯನ್ನು ದೃಢೀಕರಿಸುವ ಅವಶ್ಯಕತೆಯಿರುವುದಿಲ್ಲ. ಹಳೇ ಒಡಂಬಡಿಕೆಯ ಪ್ರವಾದನೆಗಳ ಹೆಚ್ಚು ಭಾಗವು ಇನ್ನೂ ನೆರವೇರದೆ ಉಳಿದಿರುವುದರಿಂದಲೂ, ಅವುಗಳ ನೆರವೇರುವಿಕೆಯ ಆತನ ಹಿಂದಿರುಗುವಿಕೆಯ ಮೇಲೆ ಆತುಕೊಂಡಿರುವುದರಿಂದಲೂ, ದೇವರ ವಾಕ್ಯವು ನಿರರ್ಥಕವಾಗದಿರುವುದರಿಂದಲೂ, ಧರ್ಮಶಾಸ್ತ್ರ ಮತ್ತು ಪ್ರವಾದಿಗಳು ಆತನಲ್ಲಿ ಹಾಗೂ ಆತನ ಮೂಲಕ ಯಾವುದೆಲ್ಲವೂ ಈಡೇರಬೇಕೆಂದು ಆಶಿಸಿದ್ದರೋ ಅವುಗಳನ್ನು ನೆರವೇರಿಸಲು ಕ್ರಿಸ್ತನು ಹಿಂದಿರುಗಲೇಬೇಕು, ಹೊಸ ಒಡಂಬಡಿಕೆಯ ಬಗ್ಗೆ ಹೇಳುವುದಾದರೆ, ಇಷ್ಟು ಸ್ಪಷ್ಟವಾಗಿ ಪ್ರಕಟಿಸಲ್ಪಟ್ಟ ಸತ್ಯವನ್ನು ದೃಢೀಕರಿಸಲು ಅನೇಕ ಸಾಕ್ಷ್ಯಗಳನ್ನು ಉಲ್ಲೇಖಿಸಲು ಅವಶ್ಯವಿಲ್ಲ. ಸ್ಪಷ್ಟವಾಗಿ ತಿಳಿಯುವ ಮಾರ್ಗವನ್ನು ಮುಸುಕಿ, ತಡೆದಿರುವ ಮತೀಯ ಪ್ರಪಂಚದಲ್ಲಿ ಊಹಾಪೋಹಗಳ ಮತ್ತು ಅಪಾರ್ಥಗಳಿರದಿದ್ದಲ್ಲಿ ಈ ವಿಷಯದ ಹಾಗೂ ಇತರ ವಿಷಯಗಳ ಮೇಲಿನ ಸತ್ಯವನ್ನು ಅತೀ ಸುಲಭವಾಗಿ ತಿಳಿದುಕೊಳ್ಳಬಹುದು. ಭೂಮಿಗೆ ಕ್ರಿಸ್ತನ ಹಿಂದಿರುಗುವಿಕೆಯನ್ನು ಸಂದೇಹಾತೀತವಾದ ಭಾಷೆಯಲ್ಲಿ ಈ ಕೆಳಗಿನ ಕೆಲವು ವಾಕ್ಯಗಳು ಘೋಷಿಸುತ್ತವೆ; ಕ್ರಿಸ್ತನ ಹಿಂದಿರುಗುವಿಕೆಯೆಂದು ನಾವು ಹೇಳಿದಾಗ ನಿಜವಾದ, ಶಾರೀರಕವಾದ, ವೈಯಕ್ತಿಕವಾದ ಆತನ ಹಿಂದಿರುಗುವಿಕೆಯೆಂದು ನಮ್ಮ ಅರ್ಥವೇ ಹೊರತು, ರಹಸ್ಯಾರ್ಥವುಳ್ಳ ಅಥವಾ 'ಆತ್ಮೀಕ' ಎಂದು ಹೇಳುವ ಅರ್ಥವನ್ನು ಸೇರಿಸುವಂಥದಲ್ಲ. ಆತನು ಹೋಗಿದ್ದು ಎಷ್ಟು ನಿಜವೋ ಅಷ್ಟೇ ನಿಜವಾಗಿ ಹಿಂದಿರುಗುತ್ತಾನೆಂದು ನಮ್ಮ ಅರ್ಥ. ಈ ದೃಷ್ಟಿಯನ್ನಿಟ್ಟುಕೊಂಡು ಓದುಗರು ಈ ವಾಕ್ಯಗಳನ್ನು ಪರಿಶೀಲಿಸಲಿ ಮತ್ತು ಬೇರೆ ಯಾವ ಸಿದ್ಧಾಂತಕ್ಕೂ ಬರುವುದಿಲ್ಲವೆಂದು ನೋಡಬಹುದು.

ಮತ್ತಾಯ 25:31 ; ಮನುಷ್ಯನ ಮಗನು ತನ್ನ ಮಹಿಮೆಯಲ್ಲಿ ಪರಿಶುದ್ಧ ದೂತರೆಲ್ಲರ ಸಂಗಡ ಬರುವಾಗ ತನ್ನ ಮಹಿಮೆಯ ಸಿಂಹಾಸನದ ಮೇಲೆ ಕೂಡ್ರುವನು.

**ಲೂಕ 19:12-15** : ಅವನು ಹೇಳಿದನು—ಕುಲೀನನಾದ ಒಬ್ಬ ಮನುಷ್ಯನು ರಾಜ್ಯವನ್ನು ಸಂಪಾದಿಸಿಕೊಂಡು ತಿರುಗಿ ಬರುವುದಕ್ಕೆ ದೂರದೇಶಕ್ಕೆ ಹೊರಟನು. ಅವನು ತನ್ನ ಹತ್ತುಮಂದಿ ದಾಸರನ್ನು ಕರೆದು, ಹತ್ತು ವರಹ ಅವರಿಗೆ ಕೊಟ್ಟು ನಾನು ಬರುವ ತನಕ ವ್ಯಾಪಾರ ಮಾಡಿರೆಂದು ಹೇಳಿದನು. ಅವನು ರಾಜ್ಯವನ್ನು ಸಂಪಾದಿಸಿಕೊಂಡು ತಿರುಗಿ ಬಂದಾಗ ಆ ದಾಸರನ್ನು ತನ್ನ ಬಳಿಗೆ ಕರೆದನು.

**ಯೋಹಾನ 13:33** : ಮಕ್ಕಳೇ, ಇನ್ನು ಸ್ವಲ್ಪಕಾಲ ನಿಮ್ಮ ಸಂಗಡ ಇದ್ದೇನೆ; ನನ್ನನ್ನು ಹುಡುಕುವಿರಿ ಮತ್ತು ನಾನು ಹೋಗುವಲ್ಲಿಗೆ ನೀವು ಬರಲಾರಿರೆಂದು, ಯೆಹೂದ್ಯರಿಗೆ ಹೇಳಿದ ಹಾಗೆ ಈಗ ನಿಮಗೂ ಹೇಳುತ್ತೇನೆ.

**ಯೋಹಾನ 14:3** ; ಹೋಗಿ ನಿಮಗೆ ಸ್ಥಳ-ಸಿದ್ಧ ಮಾಡಿದರೆ ನಾನು ತಿರುಗಿ ಬಂದು ನಾನಿರುವಲ್ಲಿ ನೀವೂ ಇರುವ ಹಾಗೆ ನಿಮ್ಮನ್ನು ನನ್ನ ಬಳಿಗೆ (ಇಲ್ಲಿ—ಅಲ್ಲಲ್ಲ) ಸೇರಿಸುವೆನು.

**ಅಪೋಸ್ತಲರ ಕೃತ್ಯಗಳು 1:9-11** : ಇವುಗಳನ್ನು ಹೇಳಿ, ಅವರು ನೋಡುತ್ತಿರಲಾಗಿ, ಎತ್ತಲ್ಪಟ್ಟನು ; ಮೇಘವು ಅವನನ್ನು ಅವರ ಕಣ್ಣುಗಳಿಗೆ ಮರೆಯಾಗಿ ತೆಗೆದುಕೊಂಡು ಹೋಯಿತು. ಅವರು ನೋಡುತ್ತಿರುವಾಗ ಆಕಾಶವನ್ನು ದೃಷ್ಟಿಸಲಾಗಿ, ಇಗೋ ಬಿಳೀ ವಸ್ತ್ರಗಳನ್ನು ತೊಟ್ಟುಕೊಂಡ ಇಬ್ಬರು ಪುರುಷರು ಅವರ ಬಳಿಯಲ್ಲಿ ನಿಂತುಕೊಂಡು, ಗಲಿಲಾಯದವರೇ, ಯಾಕೆ ಆಕಾಶವನ್ನು ದೃಷ್ಟಿಸುತ್ತಾ ನಿಂತುಕೊಂಡಿದ್ದೀರಿ ? ನಿಮ್ಮಲ್ಲಿಂದ ಪರಲೋಕಕ್ಕೆ ಎತ್ತಲ್ಪಟ್ಟವನಾದ **ಈ ಯೇಸು ಯಾವ ರೀತಿಯಿಂದ ಪರಲೋಕಕ್ಕೆ ಹೋಗುವುದನ್ನು ನೀವು ನೋಡಿದಿರೋ ಅದೇ ರೀತಿಯಿಂದ ಬರುವನು** ಅಂದರು.

**1 ಕೊರಿಂಥ 1:7-8** : ಆದಕಾರಣ ಯಾವದರಲ್ಲಿಯೂ ಕೊರತೆಯಾಗಿರದೆ ನಮ್ಮ ಕರ್ತನಾದ ಯೇಸುಕ್ರಿಸ್ತನು ಪ್ರತ್ಯಕ್ಷವಾಗುವುದನ್ನು ಎದುರು ನೋಡುತ್ತಾ ಇದ್ದೀರಿ. ನಮ್ಮ ಕರ್ತನಾದ ಯೇಸುಕ್ರಿಸ್ತನ ದಿವಸದಲ್ಲಿ ಅವನೇ ನೀವು ನಿರಪರಾಧಿಗಳಾಗಿರುವ ಹಾಗೆ ಕಡೇವರೆಗೂ ನಿಮ್ಮನ್ನು ಸ್ಥಿರಪಡಿಸುವನು.

**1 ಕೊರಿಂಥ 15:23** : ಆದರೆ ಒಬ್ಬೊಬ್ಬನು ಸ್ವಂತ ಕ್ರಮದಲ್ಲಿ, ಪ್ರಥಮ ಫಲ ಕ್ರಿಸ್ತನು ; ತರುವಾಯ **ಅವನ ಬರುವಿಕೆಯಲ್ಲಿ** ಕ್ರಿಸ್ತನವರು.

**ಫಿಲಿಪ್ಪಿ 3:20** : ಹೇಗೆಂದರೆ, ನಮ್ಮ ಸಂಭಾಷಣೆಯು ಪರಲೋಕಗಳಲ್ಲಿ ಉಂಟು, ಅಲ್ಲಿಂದಲೇ ಕರ್ತನಾದ ಯೇಸುಕ್ರಿಸ್ತನೆಂಬ ರಕ್ಷಕನು **ಬರುವುದನ್ನು** ಎದುರುನೋಡುತ್ತೇವೆ.

**ಕೊಲೊಸ್ಸೆ 3:4** : ನಮ್ಮ ಜೀವವಾದ ಕ್ರಿಸ್ತನು **ಪ್ರತ್ಯಕ್ಷವಾಗುವಾಗ್ಗೆ,** ನೀವೂ ಸಹಾ ಅವನ ಸಂಗಡ ಮಹಿಮೆಯಲ್ಲಿ ಪ್ರತ್ಯಕ್ಷವಾಗುವಿರಿ.

1 ಥೆಸಲೋನಿಕ 1:9-10 : ನೀವು ಜೀವವುಳ್ಳ ನಿಜವಾದ ದೇವರನ್ನು ಸೇವಿಸಲೂ ಅವನು ಸತ್ತವರೊಳಗಿಂದ ಎಬ್ಬಿಸಿದಂತ, ಬರುವ ಕೋಪದಿಂದ ನಮ್ಮನ್ನು ರಕ್ಷಿಸುವಂತ ಯೇಸು ಎಂಬ ಅವನ ಮಗನು ಪರಲೋಕಗಳಿಂದ ಬರುವುದನ್ನೂ ಎದುರುನೋಡಲು, ವಿಗ್ರಹಗಳನ್ನು ಬಿಟ್ಟು, ದೇವರ ಬಳಿಗೆ ಹೇಗೆ ತಿರುಗಿಕೊಂಡ ರೆಂದು ತಿಳಿಸುತ್ತಾರೆ.

2 ಥೆಸಲೋನಿಕ 2:1 : ಇದಲ್ಲದೆ ಸಹೋದರರೇ ನಮ್ಮ ಕರ್ತನಾದ ಯೇಸುಕ್ರಿಸ್ತನ ಬರುವಿಕೆಯನ್ನು ಅವನ ಬಳಿಗೆ ನಮ್ಮ ಕೂಡುವಿಕೆಯನ್ನೂ ಕುರಿತು.....ನಿಮ್ಮನ್ನು ಬೇಡಿಕೊಳ್ಳುತ್ತೇನೆ.

ವಚನ 8 : ಆಗಲೇ ಆ ಅನೀತಿವಂತನು ಪ್ರತ್ಯಕ್ಷನಾಗುವನು ; ಅವನನ್ನು ಕರ್ತನು ತನ್ನ ಬಾಯಿ ಆತ್ಮದಿಂದ (ಶಕ್ತಿಯಿಂದ) ಸಂಹರಿಸಿ, ತನ್ನ ಬರುವಿಕೆಯ ಪ್ರಕಾಶದಿಂದ ಅವನನ್ನು ಲಯ ಮಾಡುವನು.

2 ತಿಮೋಥೆ 4:1 : ಆದುದರಿಂದ ದೇವರ ಮುಂದೆಯೂ, ತನ್ನ ಪ್ರತ್ಯಕ್ಷತೆಯಲ್ಲಿಯೂ ತನ್ನ ರಾಜ್ಯದಲ್ಲಿಯೂ, ಬದುಕಿರುವವರಿಗೂ, ಸತ್ತವರಿಗೂ, ನ್ಯಾಯ ತೀರಿಸಲಿರುವ ನಮ್ಮ ಕರ್ತನಾದ ಯೇಸುಕ್ರಿಸ್ತನ ಮುಂದೆಯೂ ನಾನು ಕೊಡುವ ಸಾಕ್ಷಿ ಏನೆಂದರೆ—ವಾಕ್ಯವನ್ನು ಸಾರು.

ವ. 7-8 : ಒಳ್ಳೇ ಹೋರಾಟವನ್ನು ಹೋರಾಡಿದ್ದೇನೆ ; ಓಟವನ್ನು ತೀರಿಸಿದ್ದೇನೆ ; ವಿಶ್ವಾಸವನ್ನು ಕೈಕೊಂಡಿದ್ದೇನೆ ; ಇನ್ನುಮೇಲೆ ನೀತಿಯ ಕಿರೀಟವು ನನಗೋಸ್ಕರ ಇಟ್ಟಿದೆ. ಆ ದಿನದಲ್ಲಿ (ಈ ದಿನ ಅಲ್ಲ) ನೀತಿಯುಳ್ಳ ನ್ಯಾಯಾಧಿಪತಿ ಯಾದ ಕರ್ತನು ಅದನ್ನು ನನಗೆ ಕೊಡುವನು. ನನಗೆ ಮಾತ್ರವಲ್ಲ ಅವನ ಪ್ರತ್ಯಕ್ಷತೆ ಯನ್ನು ಪ್ರೀತಿಮಾಡಿರುವವರೆಲ್ಲರಿಗೂ ಸಹ.

ಇಬ್ರಿಯ 9:28 : ಕ್ರಿಸ್ತನು ಅನೇಕರ ಪಾಪಗಳನ್ನು ಹೊತ್ತುಕೊಳ್ಳುವುದಕ್ಕೆ ಒಂದೇಸಾರಿ ಅರ್ಪಿಸಲ್ಪಟ್ಟು, ಎರಡನೇ ಸಾರಿ ಅವನನ್ನು ಎದುರುನೋಡುವವರಿಗೆ, ಪಾಪವಿಲ್ಲದೆ ರಕ್ಷಣೆಗಾಗಿ ಕಾಣಿಸಿಕೊಳ್ಳುವನು.

1 ಪೇತ್ರ 1:7 : ಯಾಕೆಂದರೆ ಬೆಂಕಿಯಿಂದ ಪರೀಕ್ಷಿಸಲ್ಪಡುವಂಥ ಲಯವಾಗು ವಂಥ, ಬಂಗಾರಕ್ಕಿಂತ ಬಹು ಅಮೂಲ್ಯವಾದ ನಿಮ್ಮ ವಿಶ್ವಾಸದ ಪರೀಕ್ಷೆಯು, ಸ್ತೋತ್ರ, ಘನ, ಮಹಿಮೆಗಳುಳ್ಳದ್ದಾಗಿ ; ಯೇಸುಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಕಾಣ ಲ್ಪಡುವುದು.

1 ಯೋಹಾನ 3:2 : ಪ್ರಿಯರೇ, ಈಗ ದೇವರ ಮಕ್ಕಳಾಗಿದ್ದೇವೆ ; ಮತ್ತು ಏನಾಗಿರುವೆವೋ ಇನ್ನೂ ಕಾಣಲಿಲ್ಲ ; ಆದರೆ ಅವನು ಪ್ರತ್ಯಕ್ಷನಾಗುವಾಗ, ಅವನ ಹಾಗೆ ಇರುವೆವೆಂದು ಬಲ್ಲೆವು. ಯಾಕೆಂದರೆ ಅವನನ್ನು ಇರುವ ಪ್ರಕಾರವೇ ನೋಡುವೆವು.

ಪ್ರಕಟನೆ 1:7 ; ಇಗೋ, ಮೇಘಗಳಲ್ಲಿ ಬರುತ್ತಾನೆ. ಎಲ್ಲಾ ಕಣ್ಣುಗಳೂ ಅವನನ್ನು ನೋಡುವುವು ; ಅವನನ್ನು ತಿವಿದವರೂ ಸಹ, ಭೂಮಿಯ ಸಕಲ ಕುಲಗಳೂ ಅವನ ನಿಮಿತ್ತ ಬಡಕೊಳ್ಳುವರು ಹೌದು.

ಪ್ರಕಟನೆ 16:15 : ಇಗೋ ಕಳ್ಳನಂತೆ ಬರುತ್ತಾನೆ. ಎಚ್ಚರವಾಗಿರುವವನು ಭಾಗ್ಯವಂತನು.

ಪ್ರಕಟನೆ 22:7 : ಇಗೋ ಬೇಗ ಬರುತ್ತೇನೆ ; ಈ ಪುಸ್ತಕದ ಪ್ರವಾದನೆಯ ವಾಕ್ಯಗಳನ್ನು ಕೈಕೊಳ್ಳುವವನು ಭಾಗ್ಯವಂತನು.

ವ. 12 : ಇಗೋ ಬೇಗ ಬರುತ್ತೇನೆ, ಒಬ್ಬೊಬ್ಬನಿಗೆ ಅವನವನ ಕ್ರಿಯೆಯು ಇರುವ ಪ್ರಕಾರವೇ ಕೊಡುವುದಕ್ಕೆ ನನ್ನ ಪ್ರತಿಫಲವು ನನ್ನ ಸಂಗಡ ಇರುತ್ತದೆ.

ವ. 20 : ಇವುಗಳಿಗೆ ಸಾಕ್ಷಿಯಾದವನು ಹೇಳುತ್ತಾನೆ—ಹೌದು, ಬೇಗ ಬರುತ್ತೇನೆ ; ಆಮೆನ್. ಹೌದು ಕರ್ತನಾದ ಯೇಸುವೇ ಬಾ.

ಹೌದು ಅನೇಕರು ಹೇಳುತ್ತಾರೆ, ಸತ್ಯವೇದವು ಕ್ರಿಸ್ತನ ಎರಡನೇ ಬರುವಿಕೆಯನ್ನು ಬೋಧಿಸುವುದರಲ್ಲಿ ಸಂಶಯವಿಲ್ಲ. ಮತ್ತು ಪ್ರತಿಯೊಬ್ಬರೂ ಅದನ್ನು ನಂಬುತ್ತಾರೆ. ಆದರೆ ಅದನ್ನು ಹೇಗೆ ನಂಬುತ್ತಾರೆ ? ಯಾವ ಅರ್ಥದಲ್ಲಿ ? ಪ್ರತಿಯೊಬ್ಬ ವಿಶ್ವಾಸಿಯ ಮರಣದಲ್ಲಿ, ಆತ್ಮವನ್ನು ಪರಲೋಕಕ್ಕೆ ತೆಗೆದುಕೊಂಡು ಹೋಗುವ ನಿರೂಪಣೆಯಿಲ್ಲದ, ವಿವರಿಸಲಾಗದ ಒಂದು ಆತ್ಮೀಕ ಅರ್ಥದಲ್ಲಿ, 'ಆತನು ಬರುತ್ತಾನೆಂದು' ಕೆಲವರು ಹೇಳುತ್ತಾರೆ. ಮತ್ತೆ ಕೆಲವರು, ಭೂಲೋಕವು ದಹಿಸಲ್ಪಟ್ಟಾಗ ಸತ್ತವರನ್ನು ಎಬ್ಬಿಸಿ ಉಳಿದ, ವಿಮೋಚಿಸಲ್ಪಟ್ಟವರನ್ನೆಲ್ಲಾ ಪರಲೋಕಕ್ಕೆ ಕರೆದೊಯ್ಯಲು ಮಾತ್ರ ಆತನು ಬರುತ್ತಾನೆಂದು ಹೇಳುತ್ತಾರೆ.

ಆದರೆ ಈ ಊಹಾಪೋಹಗಳ್ಯಾವುವೂ ಮೇಲೆ ಹೇಳಿದ ಸಾಕ್ಷ್ಯಗಳಿಗೆ ಹೊಂದಿಕೆಯಾಗುವುದಿಲ್ಲ. ಆತನ ಪುನರಾಗಮನವನ್ನು ದೇವದೂತರು ಪ್ರಸಿದ್ಧಿಪಡಿಸಿದಾಗ, ಮಾನವನ ಊಹಾಪೋಹಗಳಿಗೆ ಸರಿಹೊಂದುವ ರೀತಿಯಲ್ಲಿ ತಪ್ಪಾಗಿ ಗ್ರಹಿಸಲಾಗದಂಥ, ಅಥವಾ ಅಪಾರ್ಥ ಮಾಡಲಾಗದಂತಹ ಮಾತುಗಳಲ್ಲಿ ಹೇಳಿದರು. ದೇವದೂತರು ಏನು ಹೇಳಿದರೆಂದರೆ, "ನಿಮ್ಮಲ್ಲಿಂದ ಪರಲೋಕಕ್ಕೆ ಎತ್ತಲ್ಪಟ್ಟವನಾದ ಈ ಯೇಸು ಯಾವ ರೀತಿಯಿಂದ ಪರಲೋಕಕ್ಕೆ ಹೋಗುವುದನ್ನು ನೀವು ನೋಡಿದಿರೋ ಅದೇ ರೀತಿಯಿಂದ ಬರುವನು." ಆತನು ವಾಸ್ತವವಾಗಿ ಶರೀರಧಾರಿಯಾಗಿ ಹೋದನು, ಮತ್ತು ಆತನು ಹೋಗುವುದನ್ನು ಅವರು ನೋಡಿದರು ; ಅದೇ ರೀತಿಯಲ್ಲಿಯೇ ಆತನು ಬರುವನು ಮತ್ತು "ಪ್ರತಿಯೊಂದು ಕಣ್ಣೂ ಅವನನ್ನು ನೋಡುವುದು. ಮತ್ತು ಅವನನ್ನು ತಿವಿದವರೂ ಸಹ ಅವನನ್ನು ನೋಡುವರು." ಆದ್ದರಿಂದ, ವಾಸ್ತವವಾಗಿ ಆತನ ಬರುವಿಕೆಯ ಬಗ್ಗೆ ಯಾವ ಪ್ರಶ್ನೆಯೂ ಏಳುವುದಿಲ್ಲ.

ಅಷ್ಟೆ ಅಲ್ಲ, ಆತನ ಬರುವಿಕೆಯಲ್ಲಿಯೇ ರಕ್ಷಣೆಯು ಅವಲಂಭಿಸಿದೆ ಎಂಬುದನ್ನು ಓದುಗರ ಮನಸ್ಸಿಗೆ ಒತ್ತಿ ಹೇಳುವುದೇ ನನ್ನ ಇಚ್ಛೆಯಾಗಿದೆ. "ಹೊಸಸೃಷ್ಟಿಯಲ್ಲಿ ಮನುಷ್ಯ ಕುಮಾರನು ತನ್ನ ಮಹಿಮೆಯ ಸಿಂಹಾಸನದಲ್ಲಿ ಕೂತುಕೊಳ್ಳುವಾಗ" ಆ ಹನ್ನೆರಡು ಅಪೋಸ್ತಲರು ತಮ್ಮ ಬಹುಮಾನವನ್ನು (ಪ್ರತಿಫಲ) ಪಡೆಕೊಳ್ಳುವರು. ಯಾಕೆಂದರೆ, "ನಿನ್ನನ್ನು ಹಿಂಬಾಲಿಸುವುದರಿಂದ ನಮಗೇನು ದೊರಕುತ್ತದೆ?" ಎಂಬುದೇ ಪೇತ್ರನ ಪ್ರಶ್ನೆಯಾಗಿತ್ತು. ನಮ್ಮ ಬಹುಮಾನವೇನು ? ಅದಕ್ಕೆ ರಕ್ಷಕನ ಉತ್ತರ ವೇನೆಂದರೆ "ಹೊಸಸೃಷ್ಟಿಯಲ್ಲಿ (ಪುನರುತ್ಥಾನ) ಯಾವಾಗ ಮನುಷ್ಯ ಕುಮಾರನು ತನ್ನ ಮಹಿಮೆಯ ಸಿಂಹಾಸನದಲ್ಲಿ ಕೂತುಕೊಳ್ಳುತ್ತಾನೋ ಆಗ ಅವರು "ಹನ್ನೆರಡು ಸಿಂಹಾಸನಗಳ ಮೇಲೆ ಕುಳಿತುಕೊಂಡು, ಇಸ್ರಾಯೇಲ್ಯರ ಹನ್ನೆರಡು ಕುಲಗಳಿಗೆ ನ್ಯಾಯ ತೀರಿಸುವರು." (ಮತ್ತಾಯ 19:27–28). ಎಲ್ಲವನ್ನೂ ತೊರೆದು ಆತನನ್ನು ಹಿಂಬಾಲಿಸಿದ್ದಕ್ಕಾಗಿ, ಪೇತ್ರ ಮತ್ತು ಅಪೋಸ್ತಲರು, "ಹೊಸ ಸೃಷ್ಟಿಯಲ್ಲಿ ಮನುಷ್ಯ ಕುಮಾರನು ತನ್ನ ಮಹಿಮೆಯನ್ನು ಸಿಂಹಾಸನದಲ್ಲಿ ಯಾವಾಗ ಕುಳಿತುಕೊಳ್ಳುತ್ತಾನೋ ಅಲ್ಲಿಯವರೆಗೆ ಅವರು ಹೊಂದುವಂತಿಲ್ಲ. ಯಾವಾಗ ಮನುಷ್ಯ ಕುಮಾರನು ತನ್ನ ಮಹಿಮೆಯ ಸಿಂಹಾಸನದಲ್ಲಿ ಕುಳಿತುಕೊಳ್ಳುವನು ? ಆತನು ಉತ್ತರ ಹೇಳುತ್ತಾನೆ— "ಮನುಷ್ಯನ ಮಗನು ತನ್ನ ಮಹಿಮೆಯಲ್ಲಿ ತನ್ನ ಪರಿಶುದ್ಧ ದೂತರೆಲ್ಲರ ಸಂಗಡ ಬರುವಾಗ, ತನ್ನ ಮಹಿಮೆಯ ಸಿಂಹಾಸದಲ್ಲಿ ಕೂಡ್ರುವನು." (ಮತ್ತಾಯ 25-31). ಅದೇ ಅಧ್ಯಾಯದಲ್ಲಿ ಮುಂದುವರೆದು ಓದುಗನು ಪರಿಶೀಲಿಸಲಿ. ನ್ಯಾಯ ತೀರ್ಪು ಆಗುವವರನ್ನು ಆಗ ಕ್ರಿಸ್ತನು ತನ್ನ ಮುಂದೆ ಕರೆಯುವನು, ಒಬ್ಬರಿಂದ ಒಬ್ಬನು ಪ್ರತ್ಯೇಕಿಸಲ್ಪಡುವನು; ಕೆಟ್ಟವರಿಂದ ಒಳ್ಳೆಯವರನ್ನು ಮತ್ತು ಕೆಟ್ಟವರ ಮೇಲೆ ಶಿಕ್ಷೆಯು ವಿಧಿಸಲ್ಪಡುವುದು; ಒಳ್ಳೆಯವರಿಗೆ ಬಹುಮಾನಗಳು ಕೊಡಲ್ಪಡುವುವು. ಬಲಗಡೆ ಯಲ್ಲಿರುವವರಿಗೆ ಆತನು ಹೇಳುತ್ತಾನೆ. "ನನ್ನ ತಂದೆಯಿಂದ ಆಶೀರ್ವದಿಸಲ್ಪಟ್ಟಿರುವ ವರೇ, ಬನ್ನಿರಿ ; ಜಗದುತ್ಪತ್ತಿಯಿಂದ ನಿಮಗೆ ಸಿದ್ಧಮಾಡಲ್ಪಟ್ಟ ರಾಜ್ಯವನ್ನು ಬಾಧ್ಯ ವಾಗಿ ಹೊಂದಿರಿ." (ಮತ್ತಾಯ 25:24). ಆಗ ದುಷ್ಟರು ನಿತ್ಯದಂಡನೆಗೂ, ನೀತಿ ವಂತರು ನಿತ್ಯಜೀವಕ್ಕೂ ಹೋಗುವರು. ಆದುದರಿಂದ ನೀತಿವಂತರು ನಿತ್ಯಜೀವಕ್ಕೂ ಹೋಗುವರು. ಆದುದರಿಂದ ನೀತಿವಂತರ ಪ್ರತಿಫಲವು ಮತ್ತು ದುಷ್ಟರ ದಂಡನೆಯು ಕ್ರಿಸ್ತನ ಎರಡನೇ ಬರುವಿಕೆಯ ಮೇಲೆ ಅವಲಂಬಿಸಿದೆ. ಆತನು ನೀತಿವಂತರಿಗೆ ಪ್ರತಿ ಫಲವನ್ನು ಮೊದಲು ನೀಡಿ ನಂತರ ಅವರಿಗೆ ತೀರ್ಪುಮಾಡುವುದಿಲ್ಲ. ಆತನು ಎರಡನೇ ಸಾರಿ ಬಂದ ಹೊರತು ಅವರಿಗೆ ತೀರ್ಪು ಮಾಡುವುದಿಲ್ಲ. ಆತನು ಎರಡನೆಯ ಬರುವಿಕೆಯಲ್ಲಿ ಅವರಿಗೆ ತೀರ್ಪು ಮಾಡಿದ ಹೊರತು ಅವರಿಗೆ ಪ್ರತಿಫಲವನ್ನು ಕೊಡು ವುದಿಲ್ಲ, ಆದ್ದರಿಂದ ಕ್ರಿಸ್ತನ ಪ್ರತಿಯೊಬ್ಬ ಅನುಯಾಯಿಯ ರಕ್ಷಣೆಯೂ ಆತನ ಬರುವಿಕೆಯ ಮೇಲೆ ಅವಲಂಬಿಸಿದೆ.

ಆ ಆಳುಗಳ ದಣಿಯ ದೃಷ್ಟಾಂತದಲ್ಲಿ, ಆತನ ರಾಜ್ಯವನ್ನು ಸ್ಥಾಪಿಸಲ್ಪಡುವ ಮೊದಲು, ಎಂದು ಆತನು ಅವರಿಗೆ ತೋರಿಸುತ್ತಾನೆ. ಆದ್ದರಿಂದ ನಾವು ರಾಜ್ಯ

ವನ್ನು ಪ್ರವೇಶಿಸ ವ ಮೊದಲು. ಆತನು ಪರಲೋಕಕ್ಕೆ ಹೋಗಿ ಹಿಂದಿರುಗಲೇಬೇಕು. ಆತನು ಇಲ್ಲಿ ಇಲ್ಲದಿರುವ ಅವಧಿಯಲ್ಲಿ ತನ್ನ ವಿಶ್ವಾಸಿ ಅನುಯಾಯಿಗಳು ಪಾಲಿಸಲು ಒಂದು ಆಜ್ಞೆ ಇದೆ. ಅದೇನೆಂದರೆ ಅವಿಶ್ವಾಸಿಗಳು ಅಪಾರ್ಥ ಮಾಡಿ ಅವಿಧೇಯರಾದ ಒಂದು ಆಜ್ಞೆ. ಆ ಆಜ್ಞೆ ಏನು? ಅದು ಏನಾಗಿರಬೇಕಿತ್ತೋ ಅದಾಗಿಲ್ಲವೆಂದು ನಾವು ಒತ್ತಾಯ ಪೂರ್ವಕವಾಗಿ ಹೇಳುವುದೇ ಚೆನ್ನಾಗಿದೆ. ಜನಪ್ರಿಯ ಮತೀಯ ಬೋಧರು. ಜನರಿಗೆ ಮಾಡಲೇಬೇಕೆಂದು ಹೇಳಿರುವಂತೆ, ಪರಲೋಕದಲ್ಲಿ ಅವನಲ್ಲಿಗೆ ಅವರು ಹೋಗುವವರೆಗೆ ವ್ಯಾಪಾರ ಮಾಡಿಕೊಂಡಿರ್ರಿ ಎಂದು ಆತನು ಅವರಿಗೆ ಆಜ್ಞೆ ಮಾಡಲಿಲ್ಲ. ನಮ್ಮ ಕರ್ತವ್ಯವೇನು, ನಮ್ಮ ನಿರೀಕ್ಷೆಯೇನು ಎಂದು ನಾವು ಅವರನ್ನು ಕೇಳುವುದಾದರೆ ನಮ್ಮ ರಕ್ಷಕನು ಉಪಯೋಗಿಸಿದ ಪದವನ್ನು ಉಪಯೋಗಿಸುವುದಾದರೆ, ಈ ಜೀವಿತದಲ್ಲಿ ಎಲ್ಲಿಯವರೆಗೆ ಬದುಕಿರುತ್ತಾರೋ ಅ ಲ್ಲಿ ಯ ವ ರೆ ಗೆ, ಸಾಯುವ ಪರ್ಯಂತರ ವ್ಯಾಪಾರ ಮಾಡಿಕೊಂಡಿರ್ರಿ, ನಂತರ ನೀವು ಪರಲೋಕಕ್ಕೆ ಹೋಗುವಿರಿ; ಎಂಬ ಉತ್ತರ ಬರುತ್ತದೆ. ಆದರೆ ಇಲ್ಲಿ ರಕ್ಷಕನ ಆಜ್ಞೆ ಏನು? ಸುಸ್ಪಷ್ಟ ಪದಗಳಲ್ಲಿ ಇಲ್ಲಿವೆ—"ನಾನು ಬರುವವರೆಗೂ ವ್ಯಾಪಾರ ಮಾಡಿಕೊಂಡಿರ್ರಿ" (ಲೂಕ 19:12. 27). ಆತನು ರಾಜ್ಯವನ್ನು ಪಡೆದುಕೊಂಡು ಹಿಂದಿರುಗುವಾಗ, ಆ ಆಳುಗಳನ್ನು ತನ್ನ ಬಳಿಗೆ ಕರೆತರಲು ಆಜ್ಞಾಪಿಸಿದನು. ಎಂದು ಮುಂದೆ ತಿಳಿಸಿದೆ. ಆತನು ಭೂಲೋಕದಲ್ಲಿದ್ದಾಗ ತನ್ನ ಆಳುಗಳನ್ನು ಕರೆಯುವುದನ್ನೂ, ಆ ತ ನು ಹೊರಡುವ ಮೊದಲು "ನಾನು ಬರುವವರೆಗೆ ವ್ಯಾಪಾರ ಮಾಡಿಕೊಂಡಿರ್ರಿ" ಎಂದು ಹೇಳುವುದನ್ನು ನಾವು ಭಾವಿಸೋಣ. ನಾನು ಪರಲೋಕಕ್ಕೆ ಹೊರಟುಹೋಗುತ್ತೇನೆ ಮತ್ತು ನಾನು ಹಿಂದಿರುಗಿ ಬರುತ್ತೇನೆ, ನೀವೂ ನಿಮ್ಮ ಸಂತಾನದವರೂ ಅಥವಾ ಯಾರು ನನ್ನನ್ನು ವಿಶ್ವಾಸಪೂರ್ವಕವಾಗಿ ಹಿಂಬಾಲಿಸುತ್ತಾರೋ ಅವರು, ವ್ಯಾಪಾರ ಮಾಡಿಕೊಂಡಿರಬೇಕು, ಅಂದರೆ, ನನ್ನನ್ನು ನಂಬಿ ನನ್ನ ಗೈರುಹಾಜರಿಯಲ್ಲಿ (ನಾನಿಲ್ಲದಿರುವಾಗ) ನಾನು ಬರುವವರೆಗೂ ನಂಬಿಕೆಯಿಂದಿರ್ರಿ, ಯಾ ಕೆ ಂ ದ ರೆ ನಾನು ಹಿಂದಿರುಗುತ್ತೇನೆ; ನಾನು ಹಿಂದಿರುಗಿದಾಗ, ನಿಮ್ಮನ್ನು ನನ್ನ ಮುಂದೆ ಕರೆದು ನಾನಿಲ್ಲದಿರುವಾಗ ನೀವು ಒಬ್ಬೊಬ್ಬರೂ ಹೇಗೆ ನಡಕೊಂಡಿರಿ ಎಂದು ಕೇಳುತ್ತೇನೆ; ಮತ್ತು ನಿಮಗೆ ಪ್ರತಿಫಲ ಅಥವಾ ದಂಡನೆ ಅದಕ್ಕನುಸಾರವಾಗಿ ಇ ರು ವು ದು. ಇದಕ್ಕಿಂತಲೂ ಸ್ಪಷ್ಟವಾದುದು ಯಾವುದಿದೆ? ಜನಪ್ರಿಯ ಸಿದ್ಧಾಂತಗಳಿಗೆ ಇದಕ್ಕಿಂತ ನೇ ರ ವಾ ದಿ ವಿರುದ್ಧವಾದಂತಾದ್ದು ಯಾವುದಿದೆ? ಆತನು ಆಜ್ಞಾಪಿಸಿದ ಆತನ ಆಳುಗಳು ಅವರು ಸತ್ತ ಕೂಡಲೇ ಅವನಲ್ಲಿಗೆ ಪರಲೋಕಕ್ಕೆ ಹೋದರೆ ಅಂದಿನಿಂದಲೂ ಅವರು ಅವನ ಬಳಿಯೇ ಇರುತ್ತಾರೆ. ಹಾಗಿದ್ದಲ್ಲಿ ಆತನು ಹಿಂತಿರುಗಿದಾಗ ಅವರನ್ನು ಒಟ್ಟಿಗೆ ಕರೆಯುತ್ತೇನೆ ಎಂಬುದನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? ಅವರನ್ನು ಒಟ್ಟಿಗೆ ಎರಡು ಸಾವಿರ ವರ್ಷಗಳ ಹಿಂದೆಯೇ ತನ್ನಲ್ಲಿಗೆ ಕರೆಯಲ್ಪಟ್ಟದ್ದಾದರೆ, ಈ ಭೂ ಮಿ ಗೆ ಆತನು ಹಿಂದಿರುಗಿದಾಗ ಅವರನ್ನು ಒಟ್ಟಿಗೆ ಕರೆಯುವುದು ಹೇಗೆ? ಅವರನ್ನು ಒಟ್ಟಿಗೆ ಕರೆಯುವ ಮೊದಲು ಅವರಿಗೆ ಪ್ರತಿಫಲವನ್ನು ಕೊಡುವ ಮೊದಲು

ಅವರಿಗೆ ತೀರ್ಪು ಮಾಡುವುದಕ್ಕೋಸ್ಕರ ಎಂಬುದನ್ನು ಗಮನಿಸಬೇಕು. ಆದರೆ ಅವರು ಪರಲೋಕದಲ್ಲಿದ್ದು ಎರಡು ಸಾವಿರ ವರ್ಷಗಳಿಂದ ಪ್ರತಿಫಲ ಹೊಂದಿರುವುದಾದರೆ ಅವರನ್ನು ಈ ಲೋಕಕ್ಕೆ ಹಿಂದಕ್ಕೆ ಕರೆಯಿಸಬೇಕಾಗುತ್ತದೆ. ಆಗ ಕ್ರಮಬದ್ಧವಾದವುಗಳ ವಿಪರ್ಯಾಸವು ನಮಗಾಗುತ್ತದೆ. ಒಬ್ಬ ಸಾಮಾನ್ಯ ನ್ಯಾಯಾಧಿಪತಿಯೇನಾದರೂ ಅಂತಹ ಲೋಪಕ್ಕೊಳಗಾದಲ್ಲಿ ಆತನು ತನ್ನ ಸ್ಥಾನಕ್ಕೆ ಅನರ್ಹನಾಗುತ್ತಾನೆ.

ಕ್ರಿಸ್ತನು ತನ್ನ ಶಿಷ್ಯರು ತನ್ನಲ್ಲಿಗೆ ಪರಲೋಕಕ್ಕೆ ಹೋಗಬೇಕೆಂದು ಉದ್ದೇಶಿಸಿದ್ದನು ಎಂಬುದನ್ನು ರುಜುವಾತು (ದೃಢಪಡಿಸಲು) ಮಾಡಲು ಕೆಲವರು ಯೋಹಾನ 14:1-3ನ್ನು ಉದಹರಿಸುತ್ತಾರೆ. ಸತ್ಯವೇದದ ಈ ವಾಕ್ಯಕ್ಕೆ ಮುಂದೆ ವಿಶೇಷ ಗಮನ ಕೊಡಲಾಗುತ್ತದೆ, ಆದರೆ ಅವರು ಪರಲೋಕಕ್ಕೆ ಹೋಗುವ ಬಗ್ಗೆ ಸತ್ಯವೇದದ ವಾಕ್ಯಗಳಲ್ಲಿ ಒಂದು ಪದವಾದರೂ ಇಲ್ಲ ಎಂಬುದಾಗಿ ಇಲ್ಲಿ ನಾವು ಹೇಳುತ್ತೇವೆ. ವಾಕ್ಯವು ಏನು ಹೇಳುತ್ತದೆಂದರೆ, ಕ್ರಿಸ್ತನು ಅಲ್ಲಿಗೆ ಹೋಗುವುದಾಗಿಯೂ ಮತ್ತು ಹಿಂದಕ್ಕೆ ಬರುವುದಾಗಿಯೂ ಎಂಬುದಾಗಿದೆ, "ನಾನು ಹೋಗಿ ನಿಮಗೆ ಸ್ಥಳ ಸಿದ್ಧಮಾಡಿದರೆ, ನಾನು ತಿರುಗಿ ಬರುತ್ತೇನೆ," ಎಂದು ಆತನು ಪ್ರಕಟಿಸಿದ್ದಾನೆ. ಏತಕ್ಕಾಗಿ ತಿರುಗಿ ಬರುವುದು ? ಮುಂದಿನ ವಾಕ್ಯಗಳನ್ನು ಗಮನಿಸಿ, "ನಿಮ್ಮನ್ನು ನನ್ನ ಬಳಿಗೆ ಸೇರಿಸಿಕೊಳ್ಳುವೆನು." ಎರಡು ಸಾವಿರ ವರ್ಷಗಳ ಮೊದಲೇ ಕ್ರಿಸ್ತನು ಅವರನ್ನು ಪರಲೋಕದಲ್ಲಿ ಸೇರಿಸಿಕೊಂಡಾದ ಮೇಲೆ ಪುನಃ ಆತನು ಬಂದು ಅವರನ್ನು ಸೇರಿಸಿಕೊಳ್ಳುವುದು ಹೇಗೆ?" ಇಲ್ಲಿ ಅವರನ್ನು ಸೇರಿಸಿಕೊಳ್ಳುವುದು, ಆತನು ತಿರುಗಿ ಬಂದಾಗಲೇ ಹೊರತು ಅವರು ಅವನಲ್ಲಿಗೆ ಹೋದಾಗ ಅಲ್ಲ. ಆತನು ತಿರುಗಿ ಬಂದಾಗ ಈ ಸೇರಿಸಿಕೊಳ್ಳುವಿಕೆಯು "ನಾನು ಇರುವಲ್ಲಿ" ಅಂದರೆ ನಾನು ಹಿಂತಿರುಗಿ ಬಂದಾಗ ಎಲ್ಲಿರುವೆನೋ ಅಲ್ಲಿ ಅಥವಾ ಈ ಮಾತುಗಳನ್ನು ನಾನು ಎಲ್ಲಿ ಹೇಳುತ್ತಿರುವೆನೋ ಅಲ್ಲಿ, "ಅಲ್ಲಿ ನೀವೂ ಕೂಡ ಇರಬೇಕು" ಎಂದರ್ಥ. "ನಾನು ಹೋಗುವಲ್ಲಿಗೆ ಇರಬೇಕು" ಎಂದರ್ಥವಲ್ಲ, ನಾನು ಹೋಗುವಲ್ಲಿಗೆ ನೀವು ಬರಲಾರಿರಿ. (ಯೋಹಾನ 13:33) ಎಂದು ಅವರಿಗೆ ಹೇಳಿದಾಗ, ಅವರು ಪರಲೋಕಕ್ಕೆ ಹೋಗಬೇಕೆಂಬ ಅರ್ಥದಲ್ಲಿ ಆತನು ಹೇಳಿರಲಿಲ್ಲವೆಂದು ಸ್ಪಷ್ಟವಾಗಿದೆ. ಅಪೊಸ್ತಲನಾದ ಪೌಲನು ಪರಲೋಕದಲ್ಲಿರುವ ದೇವರ ಬಗ್ಗೆ ಹೀಗೆ ಹೇಳುತ್ತಾನೆ. "ಮನುಷ್ಯರಲ್ಲಿ ಯಾರೂ ಆತನನ್ನು ಕಾಣಲಿಲ್ಲ. ಯಾರೂ ಆತನನ್ನು ಕಾಣಲಾರರು." (1 ತಿಮೋಥ 6:10). "ಯಾವನಾದರೂ ತಂದೆಯನ್ನು ಎಂದೂ ನೋಡಿಲ್ಲ" (ಯೋಹಾನ 6:46) ಎಂದು ನಮ್ಮ ರಕ್ಷಕನೂ ಸಹ ತಿಳಿಸಿದ್ದಾನೆ. ಕ್ರಿಸ್ತನು ಪರಲೋಕಕ್ಕೆ ಏರಿಹೋದ ಸಂದರ್ಭದಲ್ಲಿ ಆತನು ಯಾವ ರೀತಿಯಲ್ಲಿ ಹೋದನೋ ಅದೇ ರೀತಿಯಲ್ಲಿಯೇ ಬರುತ್ತಾನೆಂದು ದೇವದೂತರು ಭರವಸೆ ಕೊಟ್ಟಂಥಾ ಮಾತುಗಳಲ್ಲಿ ಕರ್ತನ ಆತಂಕಗೊಂಡ ಶಿಷ್ಯರಿಗೆ ಒಂದು ಸಮಾಧಾನಕರವಾಗಿತ್ತು ಎಂಬುದನ್ನು ನಾವು ಗಮನಿಸಬೇಕು, ಆ ಕಾಲದಲ್ಲಿ ಆ ರೀತಿ ಆತಂಕಗೊಂಡ ಒಂದು ಚಿಕ್ಕ ಗುಂಪೆಂದರೆ ಅವರೇ ಆಗಿದ್ದರು. ಅವರು

ಆ ರೀತಿ ಆಗಲು ಸಕಾರಣಗಳಿದ್ದವು. ಯಾಕೆಂದರೆ ಆ ಕಾಲದಲ್ಲಿ ಪ್ರಪಂಚದ ಸ್ಥಿತಿಗಳನ್ನು ನಾವು ಗಣನೆಗೆ ತೆಗೆದುಕೊಂಡಾಗ, ತಮ್ಮ ಕರ್ತನೂ ಮತ್ತು ಒಡೆಯನೊಂದಿಗೆ ಆ ಶಿಷ್ಯರು ಅನುಭವಿಸಿದ ಪರೀಕ್ಷೆಗಳು ಮತ್ತು ಕಷ್ಟಗಳು; ಯೆಹೂದ್ಯರು ಹಾಗೂ ಅನ್ಯ ಜಾತಿಯರ ಕ್ರೂರತೆಯಿಂದ ಆತನು ಅನುಭವಿಸಿದ ಶ್ರಮಗಳಿಂದಾಗಿ ಆತನ ನಂಬಿಕೆಯ ಹಿಂಬಾಲಕರು ಭಯಗ್ರಸ್ತರಾಗಿಯೂ ವಿಸ್ಮಯದಿಂದ ಕೂಡಿದ್ದವರೂ ಆಗಿದ್ದರು. ಇದರಿಂದಾಗಿ ತನ್ನ ಒಡೆಯನನ್ನು ನಾಶಪಡಿಸಲು ಯೆಹೂದ್ಯರೂ ಅನ್ಯ ಜಾತಿಯವರೂ, ಕಾಯುತ್ತಿದ್ದ ಆ ವಿಚಾರಣಾ ಗಳಿಗೆಯಲ್ಲಿ ಪೇತ್ರನು ದಿಗ್ಭ್ರಮೆಗೊಂಡವನಾಗಿ ಆಗ ತಾನು ಏನು ಹೇಳುತ್ತಿರುವೆನೆಂದು ತಿಳಿಯದೆ ಆತನನ್ನು ಅರಿಯೆನೆಂದು ಬೊಂಕಿದನು. ಅವರು ಎಂತಹ ಕಠಿಣ ಪರಿಸ್ಥಿತಿಯಲ್ಲಿದ್ದರು ಮತ್ತು ಪ್ರತಿಯೊಂದು ಹೆಜ್ಜೆಯಲ್ಲಿಯೂ ಬೆದರಿಕೆಗಳು ಅವರನ್ನು ಎದುರಾಗುತ್ತಿದ್ದವು; ಅವರ ಒಂದೇ ನಿರೀಕ್ಷೆಯ ಬಗ್ಗೆ ಆಗ ಯೋಚಿಸುವುದಾದರೆ ಯಾರೊಬ್ಬಾತನಲ್ಲಿ ಅವರು ತಮ್ಮ ದೃಢವಾದ ನಂಬಿಕೆ ಮತ್ತು ವಿಶ್ವಾಸಗಳನ್ನಿಟ್ಟಿದ್ದರೋ ಆ ಕುರಿಗಳ ಕುರುಬನು—ಕಸಿದುಕೊಳ್ಳಲ್ಪಟ್ಟು ಅವರನ್ನು ಅಂಧಕಾರಮಯವಾದ ಹಾಗೂ ಕ್ರೂರವಾದ ಪ್ರಪಂಚದಲ್ಲಿ ಕುರುಬನಿಲ್ಲದ ಕುರಿಗಳಂತೆ ಬಿಟ್ಟುಹೋಗುವಂತಹ ಸಮಯದಲ್ಲಿ — ಆ ವಿಚಾರಣೆಯ ಸಮಯದಲ್ಲಿ ಆ ಚಿಕ್ಕ ಗುಂಪಿಗೆ ಎಷ್ಟು ಆತಂಕವಿತ್ತೆಂಬುದರ ಬಗ್ಗೆ ನಮಗೆ ಮಸುಕಾದ ಅಭಿಪ್ರಾಯ ಮೂಡುತ್ತದೆ. ಮಾನವರಿಗೆ ಯಾವಾಗಲಾದರೂ ಸಂತೈಸುವಿಕೆಯ (ಸಮಾಧಾನ) ಅವಶ್ಯಕತೆ ಇದ್ದರೆ, ನಿಜವಾದ ಸಂತೈಸುವಿಕೆ ಹೊಗಳುವಿಕೆಯಲ್ಲ, ಕೇವಲ ಕವಿತಾ ಪದಗಳಲ್ಲ, ಆದರೆ ನೈಜತೆಯಿಂದ ತುಂಬಿದ ಸಂತೈಸುವಿಕೆಯು ಆ ಸಮಯದಲ್ಲಿ ಅವರಿಗೆ ಬೇಕಿತ್ತು. ಅಷ್ಟೇ ಅಲ್ಲ, ಸಾಧ್ಯವಾದಷ್ಟು ವಾಸ್ತವಿಕೆಯನ್ನು ತರುವಂತಹ ಸಂತೈಸುವಿಕೆಯು ಅವರಿಗೆ ಅವಶ್ಯವಿತ್ತು. ಆ ದೇವದೂತರು ಆ ಮನುಷ್ಯರಿಗೆ ಯಾವುದೇ ರೀತಿಯ ಭರವಸೆ ಕೊಟ್ಟರೂ ಸಹ ಅದು ಅವರಿಗೆ ತೀರ ಹತ್ತಿರವಾದದ್ದಾಗಿರಬೇಕಿತ್ತು. ಅವರು ಅನುಭವಿಸುತ್ತಿದ್ದ ತೊಂದರೆಗಳು ಮತ್ತು ಪರೀಕ್ಷೆಗಳಿಂದ ಬಿಡುಗಡೆ ಹೊಂದುವುದೇ ಪ್ರಥಮ ಆಶೀರ್ವಾದವೆಂದು ಅವರು ತಿಳಿದಿದ್ದರು. ಜನಪ್ರಿಯ ಪ್ರಪಂಚದ ರೀತ್ಯಾ ಅವರಿಗೆ ಹತ್ತಿರವಾದ ಬಿಡುಗಡೆಯೆಂದರೆ ಮರಣ ಮತ್ತು ನಮ್ಮ ಕಾಲದ ಮತೀಯ ಸಿದ್ಧಾಂತಗಳ ನಾಯಕರು ಅವರಿಗೆ ಕೊಡಬಹುದಾದಂತಹ ಸಂತೈಸುವಿಕೆ ಎಂದರೆ "ನೀವು ಆಕಾಶವನ್ನು ನೋಡುತ್ತಾ ನಿಂತಿರುವುದೇಕೆ? ನೀವು ಏಕೆ ಇಷ್ಟು ಆತಂಕಗೊಂಡಿರುವಿರಿ ನೀವು ಸಾಯಲು ಕೇವಲ ಕೆಲವೇ ವರ್ಷಗಳಿವೆ; ನಂತರ ಪರಲೋಕಕ್ಕೆ, ಕ್ರಿಸ್ತನಲ್ಲಿಗೆ, ನಿರಂತರ ಆನಂದದಲ್ಲಿ ಹಾಯಾಗಿರಲು ದೇವದೂತರ ರೆಕ್ಕೆಗಳ ಮೇಲೆ ನಿಮ್ಮನ್ನು ಕರೆದೊಯ್ಯಲಾಗುವುದು" ಪ್ರಿಯ ಓದುಗರೇ, ನಾನು ನಿಮ್ಮನ್ನು ಕೇಳುತ್ತೇನೆ, ಇದಲ್ಲವೇ ಜನಪ್ರಿಯ ಬೋಧಕರು ಕೊಡುತ್ತಿದ್ದ ಸಂತೈಸುವಿಕೆ (ಸಮಾಧಾನ)? ಸಂಕಟಕ್ಕೊಳಪಟ್ಟ ಪುರುಷರು ಮತ್ತು ಸ್ತ್ರೀಯರಿಗೆ ಅವರು ಕೊಡುವ ಸಮಾಧಾನವು ಇದಲ್ಲವೇ? ಆದರೆ ಪರಲೋಕದ ಅಧಿಕಾರದಿಂದ ಬಂದ ದೇವದೂತರ ಸಮಾಧಾನವು ಎಷ್ಟು ಭಿನ್ನವಾಗಿದೆ?

ಹೊಗಳಿಕೆಯಲ್ಲಲ್ಲ. ಸತ್ಯಕ್ಕಿಂತಲೂ ಕಾವ್ಯಕ್ಕೆ ಹೆಚ್ಚು ಗಮನೀಯವಾದಂತಹ ಬುದ್ಧಿಹೀನ ಕವಿತಾ ಕಲ್ಪನೆಗಳಲ್ಲವೇ ? ಆದರೆ ಆ ತವಕಗೊಂಡ ಜನರು ನಿರೀಕ್ಷಿಸಿದ್ದ, ಜೀವವುಳ್ಳ ಸತ್ಯವಾಕ್ಯಗಳಲ್ಲಿ ಅವರು ತಿಳಿಸುವ, ಬಿಡುಗಡೆಯು ಮರಣದಲ್ಲಲ್ಲ. ಯಾವಾತನನ್ನು ಪರಲೋಕಕ್ಕೆ ಏರಿಹೋಗುವುದನ್ನು ಕಂಡರೋ ಆ ಕ್ರಿಸ್ತನು ಅವನು ಹೋದಂಥಾ ರೀತಿಯಲ್ಲಿಯೇ ಬರುತ್ತಾನೆ. ಅಲ್ಲಿಯವರೆಗೂ ಬಿಡುಗಡೆ ಇಲ್ಲ. ಇದೇ ಅವರ ಸಮಾಧಾನ, ಆದ್ದರಿಂದ ಆತನನ್ನು ಯಾರು ವಿಶ್ವಾಸದಿಂದ ಹಿಂಬಾಲಿಸಿದರೋ ಅವರ ರಕ್ಷಣೆಯು ಕ್ರಿಸ್ತನ ಎರಡನೇ ಬರುವಿಕೆಯಲ್ಲಿ ಅವಲಂಬಿಸಿದೆ.

ಅಪೋಸ್ತಲನಾದ ಪೌಲನು ಕೊರಿಂಥದವರಿಗೆ ಬರೆಯುವಾಗ, "ಆದ ಕಾರಣ ಯಾವ ವರದಲ್ಲಿಯೂ ಕೊರತೆಯಾಗಿರದೆ, ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವ ದನ್ನು ಎದುರು ನೋಡುತ್ತಾ ಇದ್ದೀರಿ" (1ಕೊರಿಂಥ 1;7) ಎಂದು ಏಕೆ ಹೇಳುತ್ತಾನೆಂದು ನಾವು ಈಗ ಅರ್ಥ ಮಾಡಿಕೊಳ್ಳಬಲ್ಲೆವು, ಏಕೆ ಆತನು ಹಾಗೆ ಹೇಳಿದನು : "ಕ್ರಿಸ್ತನು ಪ್ರಥಮ ಫಲ ; ತರುವಾಯ ಆತನ ಬರುವಿಕೆಯಲ್ಲಿ ಆತನವರು"(1ಕೊರಿಂಥ 15:23) ; ಏಕೆ ಆತನು ಫಿಲಿಪ್ಪಿಯದವರಿಗೆ ಹೀಗೆ ತಿಳಿಸಿದನು "ನಮ್ಮ ಸಂಭಾಷಣೆಯು ಪರಲೋಕದಲ್ಲಿದೆ ? ಅಲ್ಲಿಂದಲೇ ಕರ್ತನಾದ ಯೇಸು ಕ್ರಿಸ್ತನೆಂಬ ರಕ್ಷಕನು ಬರುವುದನ್ನು ಎದುರು ನೋಡುತ್ತೇವೆ. (ಫಿಲಿಪ್ಪಿ 3:20) ; ಏಕೆ ಆತನು ಕೊಲೊಸ್ಸೆಯವರಿಗೆ ಹೀಗೆ ಹೇಳಿದನು—"ನಮಗೆ ಜೀವವಾಗಿರುವ ಕ್ರಿಸ್ತನು ಪ್ರತ್ಯಕ್ಷನಾಗುವಾಗ ನೀವು ಸಹ ಆತನ ಜೊತೆಯಲ್ಲಿ ಪ್ರಭಾವದಿಂದ ಕೂಡಿದವರಾಗಿ ಪ್ರತ್ಯಕ್ಷ ರಾಗುವಿರಿ. (ಕೊಲೊಸ್ಸೆ 3:4) ; ಆತನು ಥೆಸಲೋನಿಕದವರಿಗೆ ಏಕೆ ಹೀಗೆ ಹೇಳಿದನು— "ನೀವು ಜೀವವುಳ್ಳ ನಿಜವಾದ ದೇವರನ್ನು ಸೇವಿಸಲು, ಅವನು ಸತ್ತವರೊಳಗಿಂದ ಎಬ್ಬಿಸಿದಂಥ, ಬರುವ ಕೋಪದಿಂದ ನಮ್ಮನ್ನು ರಕ್ಷಿಸುವಂಥ ಯೇಸು ಅವನ ಮಗನು ಪರಲೋಕದಿಂದ ಬರುವುದನ್ನು ಎದುರು ನೋಡಲೂ ವಿಗ್ರಹಗಳನ್ನು ಬಿಟ್ಟು ದೇವರಬಳಿಗೆ ಹ್ಯಾಗೆ ತಿರುಗಿ ಕೊಂಡರೆಂದೂ ತಿಳಿಸುತ್ತಾರೆ. (1ಥೆ ಸ 1:9–10). ಅದೇ ಸಭೆಗೆ ಏಕೆ ಹೀಗೆ ತಿಳಿಸಿದನು : "ಇದಲ್ಲದೆ ಸಹೋದರರೇ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಬರುವಿಕೆಯನ್ನು ಅವನ ಬಳಿಗೆ ನಮ್ಮ ಕೂಡುವಿಕೆಯನ್ನು ಕುರಿತು___ಭ್ರಮೆ ಪಡಬೇಡಿರೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ." (2ಥೆಸ:–2:1). ಇದು ಕರ್ತನು ಬಂದಾಗ ನಾವು ಅವನಲ್ಲಿಗೆ ಕೂಡಿಕೊಳ್ಳುತ್ತೇವೆಂಬುದನ್ನು ಸೂಚಿಸುತ್ತದೆಯೇ ಹೊರತು, ಆತನು ಬರುವುದಕ್ಕೆ ಮೊದಲೇ ನಾವು ಪರಲೋಕದಲ್ಲಿ ಕೂಡಿಸಲ್ಪಡುತ್ತೇವೆ ಎಂದರ್ಥವಲ್ಲ, ಇದೆಲ್ಲದರ ಹೊಂದಿಕೆಯೊಂದಿಗೆ ತಿಮೋಥೆಯನಿಗೆ ಬರೆಯುವಾಗ ಆತನು ಹೇಳುತ್ತಾನೆ, "ಆದುದರಿಂದ ದೇವರ ಮುಂದೆಯೂ, ತನ್ನ ಪ್ರತ್ಯಕ್ಷತೆಯಲ್ಲಿಯೂ ತನ್ನ ರಾಜ್ಯದಲ್ಲಿಯೂ, ಬದುಕಿರುವವರಿಗೂ ಸತ್ತವರಿಗೂ ನ್ಯಾಯ ತೀರಿಸಲಿರುವ ಕರ್ತನಾದ ಯೇಸು ಕ್ರಿಸ್ತನ ಮುಂದೆಯೂ ನಾನು ಕೊಡುವ ಸಾಕ್ಷಿ. (2ತಿಮೊಥೆ 4:1), ಯಾರನ್ನು ಆತನು ನ್ಯಾಯ ತೀರಿಸುವುದು ?

ಬದುಕುವವರಿಗೂ ಸತ್ತವರಿಗೂ ಯಾವಾಗ ಆತನು ಅವರಿಗೆ ನ್ಯಾಯ ತೀರಿಸುವುದು ? ಆತನ ಪ್ರತ್ಯಕ್ಷತೆಯಲ್ಲಿ ಮತ್ತು ಆತನ ರಾಜ್ಯದಲ್ಲಿ, ಅವರಿಗೆ ಯಾವಾಗ ಪ್ರತಿಫಲ ಕೊಡುವನು ? ಅವರಿಗೆ ನ್ಯಾಯ ತೀರಿಸುವ ಮೊದಲೇ ? ಇಲ್ಲ ಆದ್ದರಿಂದ ಆತನು ಕಾಣಿಸಿಕೊಳ್ಳುವ ಮೊದಲಿಲ್ಲ, ಯಾರಿಗೆ ಆತನು ನ್ಯಾಯ ತೀರಿಸುವನು ? ನಾನು ಪುನಃ ಕೇಳುತ್ತೇನೆ ? ಬದುಕಿರುವವರಿಗೆ ; ಅವರು ಯಾರು ? ಕ್ರಿಸ್ತನು ಬಂದಾಗ ಬದುಕಿರುವವರಿಗೆ ಮತ್ತು ಸತ್ತವರಿಗೆ—ಬದುಕಿರುವವರಲ್ಲ—ಎರಡು ಗುಂಪುಗಳು, ಆತನು ಸತ್ತವರನ್ನು ಎಬ್ಬಿಸುತ್ತಾನೆ ಮತ್ತು ಅವರೊಂದಿಗೆ ಬದುಕಿರುವವರು ಅವನಲ್ಲಿ ಒಟ್ಟಿಗೆ ಕೂಡಿಸಲ್ಪಡುವರು-ಆತನು ಅವರಿಗೆ ನ್ಯಾಯ ತೀರಿಸುವನು–ಮತ್ತು ಇದು ಆತನ ಪ್ರತ್ಯಕ್ಷತೆಯಲ್ಲಿಯೂ, ಆತನ ರಾಜ್ಯದಲ್ಲಿಯೂ ನಡೆಯುವುದು. ಇದಕ್ಕಿಂತಲೂ ಸ್ಪಷ್ಟ ಮಾಡಲು ಸಾಧ್ಯವಿಲ್ಲ. ಇಂತಹ ಸ್ಪಷ್ಟ ಬೋಧನೆಯಿಂದ ಪ್ರಪಂಚವು ದಾರಿತಪ್ಪಿ ಹೋಗಿರುವುದು ನಿಜವಾಗಿಯೂ ಆಶ್ಚರ್ಯವಲ್ಲವೇ ? ಅಪೋಸ್ತಲನಾದ ಪೌಲನು ತಾನೇ ಮರಣವನ್ನು ಸಮೀಪಿಸಿದಾಗ, ತಾನು ಒಳ್ಳೆಯ ಹೋರಾಟವನ್ನು ಹೋರಾಡಿರುವುದಾಗಿಯೂ ಮತ್ತು ನಂಬಿಕೆಯನ್ನು ಕಾಪಾಡಿರುವುದಾಗಿಯೂ ಅದರಿಂದಾಗಿ ನೀತಿಯ ಕಿರೀಟವು ತನಗಾಗಿ ಇಟ್ಟಿರುವುದಾಗಿಯೂ ಹೇಳಿರುತ್ತಾನೆ. ಇನ್ನು ಮೇಲೆ, ಅಂದರೆ ನಾನು ಸತ್ತಂದಿನಿಂದ ಮುಂದೆ ಒಂದು ಗೊತ್ತಾದ ಕಾಲದವರೆಗೆ, ನನಗಾಗಿ ಒಂದು ನೀತಿಯ ಕೀರಿಟವನ್ನು ಇಟ್ಟಿದೆ ಅಥವಾ ಮೀಸಲಾಗಿಟ್ಟಿದೆ. ಜನಪ್ರಿಯ ಸಿದ್ಧಾಂತಗಳು ನಿಜವಾದಲ್ಲಿ, ಪೌಲನು ತಪ್ಪು ಅಭಿಪ್ರಾಯ ಹೊಂದಿದ್ದನು. ಏಕೆಂದರೆ, ಅದು ನೀತಿಯ ಕಿರೀಟವನ್ನು ಮೀಸಲಾಗಿಟ್ಟಿದ್ದ ಕಾಲವಲ್ಲ, ಅದು ಆತನು ಆಗಲೇ ಪಡೆದುಕೊಳ್ಳುವ ಕಾಲವಾಗಿತ್ತು. ಆತನು ಸತ್ತ ಕ್ಷಣವೇ ವಿಜೃಂಭಣೆಯಿಂದ ಪರಲೋಕಕ್ಕೆ ಏರಿಹೋಗುವನು ಮತ್ತು ಅಲ್ಲಿ ಆತನ ನೀತಿಯ ಕಿರೀಟದಿಂದ ಆತನು ಅಲಂಕರಿಸಲ್ಪಡುವನು. ಆದರೆ ಪೌಲನು ಆ ರೀತಿಯಾಗಿ ತಿಳಿದುಕೊಂಡಿರಲಿಲ್ಲ. ಆತನ ವಿಶ್ವಾಸವು ಏತಕ್ಕಾಗಿ ಆ ಒಳ್ಳೆಯ ಹೋರಾಟವನ್ನು ಹೋರಾಡಿದನೋ ಅದು ಆತನು ಸತ್ತ ನಂತರ ಮುಂದೆ ಆತನಿಗಾಗಿ ಇಡಲ್ಪಟ್ಟ ಆತನ ನೀತಿಯ ಕಿರೀಟವೆಂದು ನಂಬಿದ ವಿಶ್ವಾಸವಾಗಿತ್ತು. ಆತನು ಆ ನೀತಿಯ ಕಿರೀಟವನ್ನು ಯಾವಾಗ ಪಡೆಕೊಳ್ಳಲು ನಿರೀಕ್ಷಿಸಿದ್ದಾನೆಂದು ನಾವು ಈಗ ಆತನನ್ನು ಕೇಳೋಣ. ಆತನು ಉತ್ತರ ಕೊಡುತ್ತಾನೆ, "ನೀತಿವಂತರ ನ್ಯಾಯಾಧಿಪತಿಯಾದ ಕರ್ತನು ನನಗೆ ಕೊಡುವನು" ; ಇಲ್ಲಿ ನಮಗೆ ಸರಿಯಾದ ಉತ್ತರ ವಿದೆ, ಏಕೆಂದರೆ, ಈಗ ತಾನೇ ತಿಮೋಥೆಯನಿಗೆ ಹೇಳಿದಂತೆ, ನೀತಿವಂತರ ನ್ಯಾಯಾಧಿಪತಿಯು ಬದುಕಿರುವವರಿಗೂ ಸತ್ತವರಿಗೂ ತನ್ನ ಪ್ರತ್ಯಕ್ಷತೆಯಲ್ಲಿ ನ್ಯಾಯ ತೀರಿಸುವನು, ಮತ್ತು ಆತನು ನೀತಿವಂತರ ಒಬ್ಬ ನ್ಯಾಯಾಧಿಪತಿಯಾಗಿ ಶ್ರೀ ಪೌಲನಿಗೆ ಅವನ ನೀತಿಯ ಕಿರೀಟವನ್ನು ಕೊಡುತ್ತಾನೆ. ಆತನ ಎರಡನೇ ಬರುವಿಕೆಯವರೆಗೂ ಆತನು ನೀತಿವಂತರ ನ್ಯಾಯಾಧಿಪತಿಯಾಗಿ ಬರುವುದಿಲ್ಲವಾದ್ದರಿಂದ, ಬದುಕಿರುವವರಿಗೂ ಹಾಗೂ ಸತ್ತವರಿಗೂ ನ್ಯಾಯ ತೀರ್ಪಾಗುವದರಲ್ಲಿ ಎಣಿಸಲ್ಪಟ್ಟಿರುವ ಪೌಲನು, ಆ ನೀತಿವಂತರ ನ್ಯಾಯಾಧಿಪತಿಯ ಕೈಯಿಂದ ನ್ಯಾಯ ತೀರ್ಪಾಗುವವರೆಗೆ, ತನಗಾಗಿ

ಇಟ್ಟಿರುವ ನೀತಿಯ ಕಿರೀಟವನ್ನು ಹೇಗೆ ತಾನೇ ಪಡೆಯಲು ಸಾಧ್ಯ ? ಆತನು ಅಲ್ಲಿಗೇ ನಿಲ್ಲಿಸಲಿಲ್ಲ, ಆತನು ಮುಂದೆ ಹೇಳುತ್ತಾ, "ನೀತಿಯುಳ್ಳ ನ್ಯಾಯಾಧಿಪತಿಯಾದ ಕರ್ತನು, ಆ ದಿನದಲ್ಲಿ ತನಗೆ ಕೊಡುವನು"—ಈ ದಿನದಲ್ಲಿ ಅಲ್ಲ, ನೀವು ಗಮನಿಸಿ. ಈಗಲ್ಲ ನನ್ನ ಸಾವಿನ ದಿನದಲ್ಲಲ್ಲ. ಆದರೆ ಆ ದಿನದಲ್ಲಿ, ಕಾಲವು ಪರಿಪೂರ್ಣವಾದಾಗ ನನ್ನ ನೀತಿಯ ಕಿರೀಟವು ಇಡಲ್ಪಡುತ್ತದೆ. ಆಗ ನೀತಿಯುಳ್ಳ ನ್ಯಾಯಾಧಿಪತಿಯು ನನಗೆ ಆ ದಿನದಲ್ಲಿ ಕೊಡುವನು. ಯಾವ ದಿನ ಪೌಲನೇ? "ನನಗೆ ಮಾತ್ರವಲ್ಲ; ಅವನ ಪ್ರತ್ಯಕತೆಯನ್ನು ಪ್ರೀತಿಸುವವರೆಲ್ಲರಿಗೂ ಸಹ." (2 ತಿಮೋಥೆ 4 : 8). ಮುಂದೆ ಪೌಲನು ಹೇಳುವುದರಲ್ಲಿ ಆಶ್ಚರ್ಯವಿಲ್ಲ, "ನಾವು ಭಕ್ತಿಹೀನತ್ವವನ್ನೂ ಲೌಕಿಕ ಆಶೆಗಳನ್ನೂ ಬಿಟ್ಟು ಬಿಟ್ಟು, ಮನಃಸ್ವಸ್ಥವಾಗಿಯೂ ನೀತಿಯಾಗಿಯೂ ಭಕ್ತಿಯಾಗಿಯೂ ಈಗಿನ ಲೋಕದಲ್ಲಿ ಬದುಕಿ, ಭಾಗ್ಯವಾದ ನಿರೀಕ್ಷೆಯನ್ನು ಮಹಾ ದೇವರು ಮತ್ತು ನಮ್ಮ ರಕ್ಷಕನೂ ಆಗಿರುವ ಈ ಯೇಸುಕ್ರಿಸ್ತನ ಮಹಿಮೆಯ ಪ್ರತ್ಯಕ್ಷತೆಯನ್ನು ಎದುರು ನೋಡುವವರಾಗಿದ್ದೇವೆ." (ತೀತ 2 : 12-13).

ಇಬ್ರಿಯರಿಗೆ ಬರೆಯುವಾಗ, ತಾನು ಹೇಳುತ್ತಿರುವ ಮತ್ತು ತನ್ನ ನಿರೀಕ್ಷೆಯನ್ನು ಕೇಂದ್ರೀಕರಿಸಿರುವ ಹಾಗೂ ಕ್ರಿಸ್ತನ ಪ್ರತಿಯೊಬ್ಬ ಹಿಂಬಾಲಕರ ನಿರೀಕ್ಷೆಯ ಈ ಬರುವಿಕೆಯೇ ಎರಡನೇ ಬರುವಿಕೆಯೆಂದು ಅಪೋಸ್ತಲನು ತೋರಿಸಿದ್ದಾನೆ. ಎಲ್ಲಾ ಕಾಲದಲ್ಲಿಯೂ ಸಂಭವಿಸುವಂಥಾ ಆತ್ಮೀಕ ಬರುವಿಕೆಯಲ್ಲಿ, ಪ್ರತಿಯೊಬ್ಬ ವಿಶ್ವಾಸಿಯ ಮರಣದ ಕಾಲದಲ್ಲಿ ವಾಸ್ತವವಾಗಿ ಅದು ಬರುವಿಕೆಯೇ ಅಲ್ಲ, ಅದು ಇಲ್ಲಿಯೇ ಉಳಿದುಕೊಳ್ಳುವಂಥಾದ್ದು, ಏಕೆಂದರೆ ಜನಪ್ರಿಯ ಸಿದ್ಧಾಂತಗಳ ಪ್ರಕಾರ, ಪ್ರತಿಯೊಂದು ಕ್ಷಣದಲ್ಲೂ ವಿಶ್ವಾಸಿಗಳು ಸಾಯುತ್ತಿರುತ್ತಾರೆ, ಪ್ರತಿಯೊಬ್ಬ ವಿಶ್ವಾಸಿಯೂ ಸಾಯುವಷ್ಟು ಕ್ಷಿಪ್ರದಲ್ಲಿ ಕ್ರಿಸ್ತನು ಹೋಗುವುದೂ ಬರುವುದೂ ಎಂದರೆ ಊಹಿಸಲೂ ಆಗದಂಥಾದ್ದು. ಶರೀರವನ್ನು ಬಿಡುವ ಪ್ರತಿಯೊಬ್ಬನ ಆತ್ಮವನ್ನು ಶೇಖರಿಸಲು ಕ್ರಿಸ್ತನು ಯಾವಾಗಲೂ ಇಲ್ಲಿರಬೇಕು ಮತ್ತು ಅವರನ್ನು ಸ್ವೀಕರಿಸಲು ಕ್ರಿಸ್ತನು ಯಾವಾಗಲೂ ಪರಲೋಕದಲ್ಲಿರಬೇಕು, ಅದು ಬರುವಿಕೆಯೆಂದು ಎಂದಿಗೂ ಅರ್ಥವಲ್ಲ, ಆದರೆ ಅಪೋಸ್ತಲನು ಹೇಳುತ್ತಾನೆ, ಕ್ರಿಸ್ತನು ಅನೇಕರ ಪಾಪಗಳನ್ನು ಹೊತ್ತುಕೊಳ್ಳುವುದಕ್ಕೆ ಒಂದೇಸಾರಿ ಅರ್ಪಿಸಲ್ಪಟ್ಟು ಎರಡನೇ ಸಾರಿ ಅವನನ್ನು ಎದುರುನೋಡುವವರಿಗೆ ಪಾಪವಿಲ್ಲದೆ ರಕ್ಷಣೆಗಾಗಿ ಕಾಣಿಸಿಕೊಳ್ಳುವನು. (ಇಬ್ರಿಯ 9:28) ಈ ವಾಕ್ಯಗಳನ್ನು ಗಮನಿಸಿ. ಅವು ತುಂಬಾ ಅರ್ಥದಿಂದ ಕೂಡಿವೆ. ಅವು ಆತನು ಕಾಣಿಸಿಕೊಳ್ಳುತ್ತಾನೆಂದು ಹೇಳುವುದಲ್ಲದೆ ಆತನು ಹೇಳುವ ಈ ಕಾಣಿಸಿಕೊಳ್ಳುವಿಕೆಯು ಕ್ರಿಸ್ತನ ಎರಡನೇ ಬರುವಿಕೆಯೇ ಆಗಿದೆ. ಆ ಕಾಣಿಸಿಕೊಳ್ಳುವಿಕೆಯಲ್ಲಿ ನಮ್ಮ ಸಂಬಂಧವು ಏನಿದೆ ಎಂಬುದನ್ನೂ ಸಹ ತಿಳಿಸಲ್ಪಟ್ಟಿದೆ, ಯಾಕೆಂದರೆ ಆತನನ್ನು ಎದುರುನೋಡುವವರಿಗೆ ಅಂದರೆ ಆತನ ಎರಡನೇ ಬರುವಿಕೆಯನ್ನು ಎದುರುನೋಡುವವರಿಗೆ ಅವರ ರಕ್ಷಣೆಗಾಗಿ ಆತನು ಕಾಣಿಸಿಕೊಳ್ಳುವನು.

ಆದ್ದರಿಂದ ಯಾರು ಆತನ ಎರಡನೇ ಬರುವಿಕೆಯನ್ನು ಎದುರು ನೋಡದೇ ಇರುವರೋ ಮತ್ತು ಯಾರು ಆ ದಣಿಯು ಹಿಂದಿರುಗುವವರೆಗೂ ವ್ಯಾಪಾರ ಮಾಡುವುದಿಲ್ಲವೋ, ಅಂತಹವರ ರಕ್ಷಣೆಗಾಗಿ ಆತನು ಕಾಣಿಸಿಕೊಳ್ಳುವುದಿಲ್ಲವೆಂದು ಇದರಿಂದ ಸ್ಪಷ್ಟವಾಗುತ್ತದೆ. ಆದರೂ ಅವರು ಬದಲಾಯಿಸಿ, ಆತನ ವಾಕ್ಯವನ್ನು ತಪ್ಪಾಗಿ ಬಳಸಿ (ಅಪಾರ್ಥ ಮಾಡಿ) ಆತನು ಅವರಲ್ಲಿಗೆ ಬರುವುದರ ಬದಲು ಅತನಲ್ಲಿಗೆ ಹೋಗಲು ಪಟ್ಟುಹಿಡಿಯುತ್ತಾರೆ.

ಅಪೋಸ್ತಲನ ಈ ಮಾತುಗಳ ಮೋಶೆಯ ಕಾಲದ ಮಹಾ ಯಾಜಕನ ಪ್ರತಿಯಾಗಿರುತ್ತದೆ. ಅದೇ ಅಧ್ಯಾಯದಲ್ಲಿ ಆತನು ಗುಡಾರದ ಪರಿಶುದ್ಧ ಸ್ಥಳಗಳ ಹಾಗೂ ಸರ್ವದೋಷ ಪರಿಹಾರಕ ದಿನದಲ್ಲಿ ಮಹಾ ಯಾಜಕನು ಮಹಾ ಪವಿತ್ರ ಸ್ಥಳಕ್ಕೆ ಹೋಗುವುದನ್ನೂ ವಿವರವಾಗಿ ತಿಳಿಸಿದೆ. ಇದು ಕ್ರಿಸ್ತನು ಪರಲೋಕಕ್ಕೆ ಹೋಗುವುದರ ಪ್ರತಿರೂಪವಾಗಿರುತ್ತದೆ. ಇಸ್ರಾಯೇಲ್ಯರ ಪರವಾಗಿ ಅವರ ದೇವರಿಗೂ ಆ ಜನಾಂಗಕ್ಕೂ ಸಮಾಧಾನಕ್ಕಾಗಿ ಆ ಮಹಾ ಯಾಜಕನು ಮಹಾ ಪವಿತ್ರ ಸ್ಥಳದಲ್ಲಿ ಕಾಣಿಸಿಕೊಂಡಂತೆ, ದೇವರ ಇಸ್ರಾಯೇಲ್ಯರ ಮಹಾ ಯಾಜಕನಂತೆ ಕ್ರಿಸ್ತನು ಪರಲೋಕಕ್ಕೆ ಹೋಗಿದ್ದಾನೆ ಮತ್ತು "ನಮಗಾಗಿ ಆತನು ಮಧ್ಯಸ್ತಿಕೆ ಮಾಡಲು ಎಂದೆಂದಿಗೂ ಜೀವಿಸುವವನಾಗಿ" ಅವರಿಗಾಗಿ ಕಾಣಿಸಿಕೊಳ್ಳುವವನಾಗಿದ್ದಾನೆ. ಈಗ ಆತನು ತೆರೆಯೊಳಗೆ ಇದ್ದಾನೆ. ಇಲ್ಲಿ ನಾವು ಕೇಳಬಹುದು—ಅವರ ಮಹಾ ಯಾಜಕನು ಮಹಾ ಪವಿತ್ರ ಸ್ಥಳಕ್ಕೆ ಸಮಾಧಾನಯಜ್ಞ ಮಾಡಲು ಹೋಗಿರುವಾಗ, ಇಸ್ರಾಯೇಲ್ ಮಕ್ಕಳು ಏನು ಮಾಡಬೇಕಿತ್ತು ? ಅವರು ಹೊರಗಡೆಯೇ ಉಳಿದು, ಆತನು ಹಿಂತಿರುಗಿ ಬಂದು ಅವರಮೇಲೆ ಆಶೀರ್ವಾದ ಕೊಡುವವರೆಗೆ ಕಾಯಬೇಕಿತ್ತಲ್ಲವೇ? ಬಹುಶಃ ಅವರಲ್ಲಿ ಕೆಲವರು ಒಂದು ಹೊಸ ಸಿದ್ಧಾಂತವನ್ನು ಕಂಡು ಹಿಡಿದದ್ದಾಗಿ ಭಾವಿಸೋಣ. ಅದರಲ್ಲಿ ಯಾಜಕನು ಹೊರಗೆ ಬರುವ ತನಕ ಸಮೂಹದವರು ಕಾಯಬೇಕಿಲ್ಲವೆಂದೂ, ಆದರೆ ಮಹಾ ಪವಿತ್ರ ಸ್ಥಳದಲ್ಲಿರುವ ಯಾಜಕನ ಬಳಿಗೆ ಹೋಗುವುದೇ ಅವರ ಕರ್ತವ್ಯವೆಂದು ಘೋಷಿಸಿದಲ್ಲಿ, ಹಾಗೂ ಈ ಹೊಸ ಸಂಶೋಧನೆಯನ್ನು ಅವರು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದ್ದಲ್ಲಿ, ಫಲಿತಾಂಶವೇನಾಗುತ್ತಿತ್ತು ? ಅವರು ಒಂದೇ ಕ್ಷಣದಲ್ಲಿ ಮರಣಕ್ಕೀಡಾಗುತ್ತಿದ್ದರು. ಆ ಮಹಾ ಪವಿತ್ರಸ್ಥಳದ ಹೊಸ್ತಿಲಲ್ಲಿ ಕಾಲಿಟ್ಟ ತಕ್ಷಣವೇ ಅವನು ಕೆಳಕ್ಕೆ ಅಪ್ಪಳಿಸಲ್ಪಡುತ್ತಿದ್ದನು. ಆದ್ದರಿಂದ ಆಗ ಅವರು ಆತನು ಮಹಾ ಪವಿತ್ರ ಸ್ಥಳದಲ್ಲಿ, ಅಂಗೀಕರಿಸಲ್ಪಟ್ಟನೋ ಇಲ್ಲವೊ, ಅವರಿಗೋಸ್ಕರ ಮಾಡಿದ ಆತನ ಸಮರ್ಪಣೆಯು ದೇವರಿಂದ ಸ್ವೀಕರಿಸಲ್ಪಟ್ಟಿತೋ ಇಲ್ಲವೋ ಎಂದು ಹೊರಗಡೆಯೇ ಉಳಿದು, ಯಾಜಕನ ಉಡುಪಿನ ಗಂಟೆಗಳ ನಿನಾದವನ್ನು ಆಲಿಸುತ್ತಾ, ಎಚ್ಚರಿಕೆಯಿಂದ ಕಾಯಬೇಕಿತ್ತು. ಆತನ ಆಗಮನವನ್ನು ನಂಬಿಕೆಯಿಂದ ನಿರೀಕ್ಷಿಸುತ್ತಾ ಇರುವವರಿಗೆ, ಆತನನ್ನು ಎದುರು ನೋಡುವವರಿಗೆ ಅವರ ರಕ್ಷಣೆಗಾಗಿ ಅಥವಾ ಅವರ ದೋಷಪರಿಹಾರಕ್ಕಾಗಿ ಅಂದರೆ ವಾಸ್ತವವಾಗಿ ಆ ಜನಾಂಗವನ್ನು ರಕ್ಷಿಸುವುದಕ್ಕಾಗಿ

ಆತನು ಕಾಣಿಸಿಕೊಳ್ಳುತ್ತಿದ್ದನು ಎಂದರ್ಥ, ಮತ್ತು ಅವರನ್ನು ಜನಾಂಗವಾಗಿ ಜೀವಿಸಲು ಅನುಮತಿ ಕೊಡಲಾಗುತ್ತಿತ್ತು. ಅವರಲ್ಲಿ ಕೆಲವರು ತಾಳ್ಮೆಗೆಟ್ಟವರಾಗಿ ಮಹಾಯಾಜಕನ ಹಿಂದಿರುಗುವಿಕೆಯನ್ನು ಸದ್ಭಾವನೆಯಿಂದ ಕಾಯಲು ನಿರಾಕರಿಸುತ್ತಿದ್ದರು. ಪೌಲನು ಹೇಳುತ್ತಾನೆ. ಅವರು ತಿನ್ನಲೂ ಕುಡಿಯಲೂ ಕುಳಿತುಕೊಳ್ಳುತ್ತಿದ್ದರು, ಆಟವಾಡಲು ಎದ್ದೇಳುತ್ತಿದ್ದರು. ಅವರಲ್ಲಿ ಅನೇಕರಲ್ಲಿ ದೇವರು ಸುಪ್ರೀತನಾಗಿರಲಿಲ್ಲ. ಈ ಛಾಯಾಚಿತ್ರವನ್ನು ನಿಜರೂಪಕ್ಕೆ ಅನ್ವಯಿಸಿ, ಕ್ರಿಸ್ತನ ಸತ್ಯಸಭೆಯೇ ಸಮೂಹವು, ಮಹಾಯಾಜಕನು ದೇವರ ಸಮ್ಮುಖದಲ್ಲಿ ಅವರಿಗೋಸ್ಕರ ಕಾಣಿಸಿಕೊಳ್ಳಲು ಮಹಾಪವಿತ್ರ ಸ್ಥಳಕ್ಕೆ ಹೋಗಿದ್ದಾನೆ. ಏತಕ್ಕಾಗಿ ನಾವು ಕಾದುಕೊಂಡಿದ್ದೇವೆ ? ಆತನ ಹಿಂದಿರುಗುವಿಕೆಗೆ, ಸ್ವಧರ್ಮವನ್ನು ಬಿಟ್ಟವರು ತಿನ್ನಲೂ ಕುಡಿಯಲೂ ಕುಳಿತಿರುತ್ತಾರೆ; ಆಟವಾಡಲು ಎದ್ದಿರುತ್ತಾರೆ. ಮತ್ತು ಮನುಷ್ಯರ ಸಿದ್ಧಾಂತಗಳೊಂದಿಗೆ ಹಾಗೂ ಹೊಸ ಸಂಶೋಧನೆಗಳೊಂದಿಗೆ (ಗಾಳಿಗೋಪುರ ಕಟ್ಟುತ್ತಾ) ಸಾಹಸ ಮಾಡುತ್ತಾ ಇರುತ್ತಿದ್ದಾರೆ. ಮಹಾ ಯಾಜಕನ ಹಿಂದಿರುಗುವಿಕೆಯನ್ನು ಕಾಯದೆ ಆತನ ಪ್ರತ್ಯಕ್ಷತೆ ಇರುವಲ್ಲಿಗೆ ಪ್ರವೇಶಿಸ ಹೋಗುವವರಾಗಿದ್ದಾರೆ. ಆತನಿಗಾಗಿ ಅವರು ಎದುರು ನೋಡುತ್ತಿರುವುದಾಗಿಯೂ ಆತನ ಹಿಂದಿರುಗುವಿಕೆಗಾಗಿ ಕಾಯುತ್ತಿರುವುದಾಗಿಯೂ ಹೇಗೆ ತಾನೇ ಹೇಳುವುದು ? ಅವರು ಅವಿಶ್ವಾಸಿಗಳು, ಅವರು ಸ್ವಧರ್ಮವನ್ನು ಬಿಟ್ಟವರಾಗಿದ್ದಾರೆ. ಅವರಲ್ಲಿ ದೇವರು ಸುಪ್ರೀತನಾಗಿಲ್ಲ. ಅವರು ಹಿಂದಿನ ಇಸ್ರಾಯೇಲ್ಯರಂತಿದ್ದಾರೆ. ಅವರಿಗೆ ಮಹಾಯಾಜಕನು ಪಾಪವಿಲ್ಲದೆ ಅವರ ರಕ್ಷಣೆಗಾಗಿ ಎರಡನೇ ಸಾರಿ ಕಾಣಿಸಿಕೊಳ್ಳುವುದಿಲ್ಲ. ಆತನು ಬರುವವರೆಗೂ ವ್ಯಾಪಾರ ಮಾಡಿಕೊಂಡಿರುವವರಿಗೆ, ವಿಗ್ರಹಗಳನ್ನು ತೊರೆದು, ಜೀವವುಳ್ಳ ಹಾಗೂ ಸತ್ಯ ದೇವರನ್ನು ಸೇವಿಸುವಂಥಹ ಮತ್ತು ಪರಲೋಕದಿಂದ ಬರುವ ಆತನ ಮಗನಿಗಾಗಿ ಕಾಯುವಂತಹವರಿಗೆ, ಅವರ ರಕ್ಷಣೆಗಾಗಿ ಆತನು ಕಾಣಿಸಿಕೊಳ್ಳುತ್ತಾನೆ. ಆದ್ದರಿಂದ ಕೇಳುತ್ತಾನೆ, "ಇಗೋ, ಕಳ್ಳನು ಬರುವಂತೆ ಬರುತ್ತೇನೆ; ತಾನು ಬೆತ್ತಲೆಯಾಗಿ ಅವಮಾನಕ್ಕೆ ಗುರಿಯಾದೇನೆಂದು ಎಚ್ಚರವಾಗಿದ್ದು ತನ್ನ ವಸ್ತ್ರಗಳನ್ನು ಕಾಪಾಡಿಕೊಳ್ಳುವವನು ಧನ್ಯನು. (ಪ್ರಕ 16 : 15). ಇಗೋ, ನಾನು ಶೀಘ್ರವಾಗಿ ಬರುತ್ತೇನೆ ಅಂದರೆ ಶೀಘ್ರವಾಗಿ ಅಥವಾ ಇದ್ದಕ್ಕಿದ್ದಂತೆಯೇ, ಅಂದರೆ ಈ ಹಿಂದೆಯೇ ತೋರಿಸಿದ ಸಂಗತಿಗಳು ಸಂಭವಿಸಿದ ಮೇಲೆ ಎಂದು ಆತನ ಅರ್ಥ. ಯೋಹಾನನನ್ನು ಆತನ ದಿನದಿಂದ ಕ್ರಿಸ್ತನು ಬರುವ ಕಾಲದವರೆವಿಗೆ ಪ್ರಪಂಚದ ಚರಿತ್ರೆಯೊಳಕ್ಕೆ ಸಂಕೇತವಾಗಿ ಕರೆತರಲಾಯಿತು. ಮಾನವ ಘಟನೆಗಳ ಕಾರ್ಯಕ್ರಮವು ಆತನ ಮುಂದೆ ದೃಶ್ಯ ಪರಂಪರೆ (ಒಂದೊಂದಾಗಿ) ಯಾಗಿ ತೋರಿಸಲ್ಪಟ್ಟಿತು. ಮತ್ತು ಆ ದೂತನ ಮಾತುಗಳು ನೇರವೇರುವ ಸಮಯಕ್ಕೆ ಆತನು ಬಂದಾಗ ಕ್ರಿಸ್ತನು ಯಾವ ರೀತಿಯಲ್ಲಿ ಪರಲೋಕಕ್ಕೆ ಹೋದನೋ ಅದೇ ರೀತಿಯಲ್ಲಿ ಪುನಃ ಬರುತ್ತಾನೆ. ಆಗ, "ಇಗೋ, ನಾನು ಬೇಗ ಬರುತ್ತೇನೆ. ಈ ಪುಸ್ತಕದ ಪ್ರವಾದನೆಯ ವಾಕ್ಯಗಳನ್ನು ಕೈಕೊಳ್ಳುವವನು ಭಾಗ್ಯವಂತನು." (ಪ್ರಕ. 22 : 7) ಎಂದು ಕ್ರಿಸ್ತನು ಪರಲೋಕದಿಂದ ಕರೆಯುವುದನ್ನು ಆತನು ಕೇಳುತ್ತಾನೆ. ಪುನಃ ಆತನು ಹೇಳುತ್ತಾನೆ. "ಇಗೋ, ಬೇಗ ಬರುತ್ತೇನೆ, ಮತ್ತು ಒಬ್ಬೊಬ್ಬನಿಗೆ ಅವನವನ ಕ್ರಿಯೆಯು ಇರುವ ಪ್ರಕಾರವೇ ಕೊಡುವುದಕ್ಕೆ ನನ್ನ ಪ್ರತಿಫಲವು ನನ್ನ ಸಂಗಡ ಇರುತ್ತದೆ" (ವಚನ 12). ಇವುಗಳಿಗೆ ಸಾಕ್ಷಿಯಾದವನು ಹೇಳುತ್ತಾನೆ. ಹೌದು ಬೇಗ ಬರುತ್ತೇನೆ." ಅದಕ್ಕೆ ಪ್ರತಿಯೊಬ್ಬ ನಿಜ ಹಾಗೂ ನಂಬಿಕೆಯ ಹಿಂಬಾಲಕರ ಪ್ರತಿಕ್ರಿಯೆಯು "ಹೌದು, ಕರ್ತನಾದ ಯೇಸುವೇ ಬಾ" ಎಂಬುದಾಗಿದೆ. ಆದರೆ ಈ

ಮಾತುಗಳನ್ನು ಗಮನಿಸಿ, "ಇಗೋ ಬೇಗ ಬರುತ್ತೇನೆ ಮತ್ತು ಒಬ್ಬೊಬ್ಬನಿಗೆ ಅವನವನ ಕ್ರಿಯೆಯು ಇರುವ ಪ್ರಕಾರವೇ ಕೊಡುವುದಕ್ಕೆ ನನ್ನ ಪ್ರತಿಫಲವು ನನ್ನ ಸಂಗಡ ಇರುತ್ತದೆ" ತುಂಬಾ ತಡ! ತುಂಬಾ ತಡ! ಎಂದು ಜನ ಪ್ರಿಯ ಸಿದ್ಧಾಂತಿಯು ಕೂಗುತ್ತಾನೆ. ಹೇಬೆಲ್ ನೋಹ, ಅಬ್ರಹಾಮ ಎಲ್ಲರೂ ಅವರು ಸತ್ತ ಕ್ಷಣ ತಮ್ಮ ಪ್ರತಿಫಲಕ್ಕೆ ಹೋದರು. ಅವರ ಕ್ರಿಯೆಗೆ ತಕ್ಕಂತೆ ಅವರಿಗೆ ಪ್ರತಿಫಲ ಕೊಡಲು ಅವರಲ್ಲಿಗೆ ಬರುವುದು ಈಗ ತುಂಬಾ ತಡವಾಗಿದೆ. ಅವರ ಪ್ರತಿಫಲವು ಯುಗಾಂತರಗಳ ಮೊದಲೇ ಹೊಂದಿದ ಅನುಭವವಾಗಿದೆ. ತುಂಬಾ ತಡ! ತುಂಬಾ ತಡ! ಮಾನವ ಕಲ್ಪಿತ ಸಂಪ್ರದಾಯಗಳನ್ನು ಹೆಗ್ಗಣಗಳಿಗೂ ಬಾವಲಿಗಳಿಗೂ ಬಿಸಾಡಿ. ಕ್ರಿಸ್ತನ ಮಾತುಗಳು ನಮ್ಮ ಹೃದಯದಾಳಕ್ಕೆ ಹೋಗಲಿ; ನಾವು ಅವುಗಳನ್ನು ನಂಬೋಣ; ನಾವು ಅವುಗಳಿಗೆ ವಿಧೇಯರಾಗೋಣ; ನಾವು ನಂಬಿಕೆಯಿಂದ ಎಚ್ಚರವಾಗಿದ್ದು ಆತನ ಬರೋಣವನ್ನು ಕಾಯೋಣ, ಆತನನ್ನು ಎದುರು ನೋಡುವವರಿಗೆ ಆತನು ಪಾಪವಿಲ್ಲದೆ ಎರಡನೆಯ ಸಾರಿ ರಕ್ಷಣೆಗಾಗಿ ಕಾಣಿಸಿಕೊಳ್ಳುತ್ತಾನೆ. "ಹೌದು ಕರ್ತನಾದ ಯೇಸುವೇ ಬಾ."

ಪ್ರಿಯ ಓದುಗರೇ, ನಿಮ್ಮನ್ನು ಕೇಳಿಕೊಳ್ಳುವುದೇನೆಂದರೆ, ಪರಲೋಕದಿಂದ ಮಾತಾಡುವ ಶಬ್ದವನ್ನು ಕೇಳಿರಿ, ನಿಶ್ಚಯವಾಗಿಯೂ ನಾನು ಬೇಗ ಬರುತ್ತೇನೆ, ಏಕೆಂದರೆ, ಬೇಗ ಎನ್ನುವಾಗ ಹಿಂದಿಗಿಂತಲೂ ತ್ವರೆಯಾಗಿ ಎಂಬರ್ಥವಾಗುವ ದಿವಸಗಳಲ್ಲಿ ನಾವು ಇದ್ದೇವೆ. "ಹೌದು ಕರ್ತನಾದ ಯೇಸುವೇ ಬಾ." ಎಂದು ಪ್ರತ್ಯುತ್ತರ ನೀಡಲು ಸಮರ್ಥರಾಗುವಂತೆ, ದೇವರೊಂದಿಗೆ ಅಂತಹ ಸಂಬಂಧ ಹೊಂದುವ ಹಾಗೆ ನಿಮ್ಮನ್ನು ಸಿದ್ಧಪಡಿಸಿಕೊಳ್ಳಿರಿ. ನೀವು ಇಸ್ರಾಯೇಲನ ಸ್ವತಂತ್ರ ಸಂಸ್ಥೆಯು ಹೊರಗಿನವರಾದರೆ ಈ ವಾಗ್ದಾನವು ನಿಮಗೆ ಸಂತೋಷಕರವಾದುದಲ್ಲ. ಭಯಗ್ರಸ್ಥರಾದ ಮಾನವನ ಹೃದಯಗಳು ಕುಂದುತ್ತಿರುವ ಈ ದಿವಸಗಳಲ್ಲಿ ಇದನ್ನು ಸ್ವಾಗತಿಸಲು ವಿಶ್ವಾಸಿ ನಂಬಿಗಸ್ತರಿಂದಲೇ ಸಾಧ್ಯ. ಅವರ ಧ್ಯಾನವು ಸಜೀವಗೊಳಿಸುವುದಲ್ಲದೆ ಹುರಿದುಂಬಿಸುತ್ತದೆ, ಅವರ ಆಸಕ್ತಿಯನ್ನು ಅದು ತೀವ್ರಗೊಳಿಸುತ್ತದೆ, ಅವರನ್ನು ನಿರರ್ಥಕತೆ, ತಿರುಳಿಲ್ಲದ ಹಾಗೂ ಸ್ವಾರ್ಥತೆಯಿಂದ ಕೂಡಿದ ಪ್ರಪಂಚದಿಂದ ಬೇರ್ಪಡಿಸುತ್ತದೆ. ಅದು ಅವರ ನಡವಳಿಕೆಗೆ ಗಾಂಭೀರ್ಯವನ್ನೀಯುತ್ತದೆ. ಅವರ ಮಾತುಗಳಿಗೆ ಕೃತಿಗಳಿಗೆ ವಿಶೇಷವಾದ ಪ್ರಾಮುಖ್ಯತೆಯನ್ನೀಯುತ್ತದೆ. ಬಲಕ್ಕೂ ಎಡಕ್ಕೂ ನಾಶನವಿರುವಂತಹ ತೊಂದರೆ ಕ್ಲೇಶಗಳನ್ನೊಳಗೊಂಡ ಜೀವಿತದಿಂದ ರಕ್ಷಿಸಿ ಮಾರ್ಗದರ್ಶನ ನೀಡುತ್ತದೆ. ಈ ಕಾರ್ಯಕವು ತುಂಬಾ ಕಠಿಣತರವಾದದ್ದು. ಆದರೆ ಈ ನಂಬಿಕೆಯು ಪರೀಕ್ಷೆಯು ತುಂಬಾ ಗಡುಸೆಂದು ಆಲೋಚಿಸಬೇಡ ವಿಶ್ವಾಸದ ಸೇವೆಯು ಎಲ್ಲಾ ಗ್ರಹಿಕೆಯನ್ನು ಮೀರುವ ಮಾನಸಿಕ ಸಮಾಧಾನದಿಂದ ಈಗಲೂ ಸಹ ತನ್ನದೇ ಆದ ಪ್ರತಿಫಲವನ್ನು ತರುತ್ತದೆ. ನಶಿಸಿಹೋಗದಂತಹ ಮತ್ತು ಮಲಿನವಾಗದ ಹಾಗೂ ಮಾಸಿ ಹೋಗದಂಥ ಬಾಧ್ಯತ್ವವನ್ನು ಅದು ನಿಶ್ಚಯವಾಗಿಯೂ ಕೊಡುತ್ತದೆ. ಈ ಆಶೀರ್ವಾದವು ಸಿಕ್ಕುವಂತಿದ್ದರೂ ಕೂಡ ನೀನು ಸಾಯುವುದೇಕೆ? ರೊಟ್ಟಿಯಲ್ಲದ್ದಕ್ಕಾಗಲೀ ಸಂತೃಪ್ತಿಗೊಳಿಸಲಾಗದ್ದಕ್ಕಾಗಲೀ ನೀವು ಒಳಗಾಗಬೇಡಿ. ನೊಗವು ಸುಲಭವಾಗಿದೆ ಮತ್ತು ಹೊರೆಯು ಹಗುರವಾಗಿದೆ. ವರ್ಣಿಸಲಾಗದ ಹಾಗೂ ಮಹಿಮೆಯಿಂದ ತುಂಬಿದ ಸಂತೋಷವು ಅಂತ್ಯದಲ್ಲಿದೆ.